ಬೆಲೆ ರೂ.2.50 WPP No. SK/WPP/UDP/81/2012-2014
D.O.P - 15-12-2013 at Udupi Sorting Office

Smt. Nagaveni Ullas
Proprietor
Mobile : 9741626190
E-mail : rao.ullas@yahoo.co.in

RAMDEV ENTERPRISES
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಮೇ 2014

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-14 ಸಂಚಿಕೆ-5 ಪುಟಗಳು-8 Registered Under No.KA/SK/UDP/1260/2012-2014 Dated from 01-01-2012 to 31-12-2014.

## ಶಂಕರ ಜಯಂತಿ ಆಚರಣೆ



"ತಮ್ಮ 8ನೇ ವರ್ಷದಲ್ಲಿ ನಾಲ್ಕು ವೇದಗಳನ್ನು, 12ನೇ ವರ್ಷದಲ್ಲಿ ಸಕಲ ಶಾಸ್ತ್ರಗಳನ್ನು ಅಧ್ಯಯನ ಮಾಡಿ ಅವುಗಳ ಒಳ–ಹೊರ ಹೂರಣಗಳನ್ನು ತಿಳಿದುಕೊಂಡದ್ದಲ್ಲದೆ, 16ನೇ ವಯಸ್ಸಿಗೆ ಯಾವ ಪಂಡಿತರನ್ನೂ ಮೀರಿಸುವಂತಹ ಭಾಷ್ಯಗಳನ್ನು ಬರೆದು ಈ ಜಗತ್ತಿಗೆ ಅರ್ಪಿಸಿ 32ನೇ ವರ್ಷದಲ್ಲಿ ಇಹಲೋಕದ ವ್ಯಾಪಾರವನ್ನೇ ಮುಗಿಸಿ, ಶ್ರೇಷ್ಠ ಆಚಾರ್ಯರೆಂದೇ ಖ್ಯಾತರಾದ ಆದಿಶಂಕರರು ನಮ್ಮ ಸಾಮಾಜಿಕ ದುರಂತಗಳಿಗೆ ನಮ್ಮಲ್ಲಿರುವ ಅವಿನಯವೇ ಕಾರಣ. ಅದಕ್ಕಾಗಿ ಇಂದ್ರಿಯ ನಿಗ್ರಹ ಮಾಡಿಕೊಳ್ಳಿ, ತಾಯ್ತನ, ಹೆಣ್ತನಕ್ಕೆ ಗೌರವ ನೀಡಿ, ಮೋಹ ಕ್ಷಯವೇ ಮೋಕ್ಷಕ್ಕೆ ದಾರಿ, ಆ ಮೂಲಕ ವಿದ್ಯಾಸಂಪನ್ನರಾಗಿ –ಎಂದು ತಾನೇ ರಚಿಸಿದ ಶ್ಲೋಕಗಳ ಮೂಲಕ ಈ ಜಗತ್ತಿಗೆ ಸಾರಿದ್ದಾರೆ." ಎಂದು ವಿದ್ವಾಂಸರೂ, ಕಾರ್ಕಳ ಭುವನೇಂದ್ರ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರೂ ಆದ ಶ್ರೀ ಅಲೇಖಾ ಮಂಜುನಾಥ ಭಟ್ಟರು ಹೇಳಿದ್ದಾರೆ.

ಅವರು ಉಡುಪಿಯ ಶಾರದಾ ಮಂಟಪದಲ್ಲಿ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಜ್ಞಾನಭಾರತಿ (ರಿ) ಮತ್ತು ಹವ್ಯಕ ಸಭಾ (ರಿ) ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಶ್ರೀ ಶಂಕರ ಜಯಂತಿ ಆಚರಣೆಯ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದು, ಪ್ರವಚನ ಮಾಡಿದರು. ಹಿರಿಯ ವಿದ್ವಾಂಸರಾದ ವೇದಮೂರ್ತಿ ಶ್ರೀ ಭವಾನಿಶಂಕರ ಉಪಾಧ್ಯಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜ್ಞಾನಭಾರತಿ(ರಿ) ಹಾಗೂ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಇದರ ಅಧ್ಯಕ್ಷರೂ ಆದ ಶ್ರೀ ಪ್ರಫುಲ್ಲಚಂದ್ರರಾಯರು ಶಂಕರ ಜಯಂತಿಯ ಮಹತ್ವವನ್ನು ತಿಳಿಸಿದರು. ಹವ್ಯಕ ಸಭಾದ ಉಪಾಧ್ಯಕ್ಷ ಡಾ। ಉಪ್ಪಂಗಳ ರಾಮಭಟ್ ಸಮಯೋಚಿತವಾಗಿ ಮಾತನಾಡಿದರು. ಶ್ರೀ ಜ್ಞಾನ ಭಾರತಿ (ರಿ), ಇದರ ಕಾರ್ಯದರ್ಶಿ ಡಾ। ಎಸ್.ಎಲ್. ಕರಣಿಕ್ ಸ್ವಾಗತಿಸಿದರು. ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಇದರ ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಧನ್ಯವಾದ ಅರ್ಪಿಸಿದರು. ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ಸಂಯೋಜನೆ ಮಾಡಿದರು.

## ಪಲ್ಲವಿ ರಾವ್ ಕೆ. ಇವರ ಅದ್ವಿತೀಯ ಸಾಧನೆ



ಸುರತ್ಕಲ್ ಗೋವಿಂದದಾಸ ಪ.ಪೂ. ಕಾಲೇಜಿನ ವಿದ್ಯಾರ್ಥಿನಿ ಪಲ್ಲವಿ ಕೆ. ರಾವ್ ಅವರು 593 ಅಂಕ ಗಳಿಸಿ 2013–14ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ರಾಜ್ಯದಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ. ಈಕೆ 2011–12ನೇ ಸಾಲಿನ 10ನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿಯೂ 621 ಅಂಕಗಳೊಂದಿಗೆ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅದಕ್ಕಾಗಿ ಉಡುಪಿಯ ಶಾರದಾ ಮಂಟಪದಲ್ಲಿ ಸಂಘದ ವತಿಯಿಂದ ಈಕೆಯನ್ನು ಅಭಿನಂದಿಸಲಾಗಿತ್ತು.

ಪಲ್ಲವಿ ರಾವ್ ಕೆ. ಅವರು ಸ್ಥಾನಿಕ ಸಮಾಜದ, ಪ್ರಸ್ತುತ ಸುರತ್ಕಲ್‌ನ ರೀಜಂಟ್ ಪಾರ್ಕ್ ಬಳಿಯ ನಿವಾಸಿ, ಬೈಕಂಪಾಡಿಯ ಪ್ರೈಮಸಿ ಇಂಡಸ್ಟ್ರೀಸ್‌ನ ಉದ್ಯೋಗಿ ಕಾಪು ಶ್ರೀ ಮಂಜುನಾಥ್ ರಾವ್ ಹಾಗೂ ಶ್ರೀಮತಿ ಭುವನೇಶ್ವರಿ ಅವರ ಪುತ್ರಿ. ತಂದೆ, ತಾಯಿ, ಗುರುಗಳ ಪ್ರೋತ್ಸಾಹ ತನ್ನ ಸಾಧನೆಗೆ ಪ್ರೇರಣೆ ಎಂದು ಈಕೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ.

ದಿನಕ್ಕೆ ಐದು ಗಂಟೆ ಅಧ್ಯಯನ ನಡೆಸುತ್ತಿದ್ದೆ. ನಿರೀಕ್ಷೆಗೆ ತಕ್ಕಂತೆ ಅಂಕ ಬಂದಿದೆ ಎಂದು ಸಂತಸ ಹಂಚಿಕೊಂಡ ಪಲ್ಲವಿ ರಾವ್ ಮುಂದೆ ಎಂಜಿನಿಯರ್ ಆಗಬೇಕೆಂಬ ಕನಸು ಹೊಂದಿದ್ದಾರೆ. ಪಿಸಿಎಂಎಸ್ ವಿದ್ಯಾರ್ಥಿನಿಯಾಗಿರುವ ಇವರು ರಸಾಯನಶಾಸ್ತ್ರ, ಗಣಿತಶಾಸ್ತ್ರ, ಸ್ಟಾಟಿಸ್ಟಿಕ್ಸ್‌ನಲ್ಲಿ ತಲಾ 100, ಭೌತಶಾಸ್ತ್ರ 99, ಇಂಗ್ಲಿಷ್ 97, ಸಂಸ್ಕೃತದಲ್ಲಿ 97 ಅಂಕ ಗಳಿಸಿದ್ದಾರೆ.

ಕು। ಪಲ್ಲವಿರಾವ್ ಅವಳ ಈ ಅದ್ವಿತೀಯ ಸಾಧನೆಗಾಗಿ ಉಡುಪಿಯ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವತಿಯಿಂದ ಹಾಗೂ ಸಮಾಜದ ಎಲ್ಲರ ಪರವಾಗಿ ಹಾರ್ದಿಕ ಅಭಿನಂದನೆಗಳು.

## ಸಾಮೂಹಿಕ ಉಪನಯನ

ಉಡುಪಿಯ ಶಾರದಾ ಮಂಟಪದಲ್ಲಿ ಶ್ರೀ ಶಂಕರ ಜಯಂತಿ ಪ್ರಯುಕ್ತ ಪ್ರತಿವರ್ಷದಂತೆ ಸಮಾಜದ ವಟುಗಳಿಗೆ ಸಾಮೂಹಿಕ ಉಪನಯನವು ನೆರವೇರಿತು. ಈ ಬಾರಿ ಇಬ್ಬರು ವಟುಗಳು ಭಾಗವಹಿಸಿದ್ದರು. ಬೆಳಿಗ್ಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ದೇವತಾ ಪ್ರಾರ್ಥನೆ ನಡೆದು, ಶಾರದಾ ಮಂಟಪದಲ್ಲಿ ವೇದಮೂರ್ತಿ ಪಾವಂಜೆ ಜಗದೀಶ ಉಪಾಧ್ಯಾಯರ ಪೌರೋಹಿತ್ಯದಲ್ಲಿ ಸುಮೂಹೂರ್ತದಲ್ಲಿ ಯಜ್ಞೋಪವೀತಧಾರಣೆ ಮಾಡಿ ಬ್ರಹ್ಮೋಪದೇಶ ನೀಡಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಸಂಘದ ಪದಾಧಿಕಾರಿಗಳು, ಸದಸ್ಯರು ಕೂಡಾ ಭಾಗವಹಿಸಿದ್ದರು. ನಂತರ ಶಂಕರ ಜಯಂತಿ ಸಭಾ ಕಾರ್ಯಕ್ರಮ ನಡೆದು ಮಧ್ಯಾಹ್ನ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಪೂಜೆ ನೆರವೇರಿತು. ಕೊನೆಯಲ್ಲಿ ಆಗಮಿಸಿದ ಭಕ್ತ ಬಾಂಧವರೆಲ್ಲರೂ ಭೋಜನ ಪ್ರಸಾದ ಸ್ವೀಕರಿಸಿದರು.

## ಶ್ರೀ ಶಾರದಾ ಮಂಟಪದಲ್ಲಿ ಗಾಯತ್ರಿ ಯಜ್ಞ



ಪಾವಂಜೆಯ ಎಚ್. ಸುಬ್ರಾಯಭಟ್ ಸ್ಮಾರಕ ವೇದಪ್ರಚಾರಸಮಿತಿಯ ವತಿಯಿಂದ ಕಳೆದ ತಿಂಗಳಲ್ಲಿ ಪ್ರಾರಂಭಗೊಂಡ ಶ್ರೀ ಗಾಯತ್ರೀ ಯಜ್ಞವು ಉಭಯ ಜಿಲ್ಲೆಗಳಲ್ಲಿ ಅಲ್ಲದೆ ಹೊರರಾಜ್ಯಗಳಲ್ಲೂ ಸಮಾಜದ ಮನೆ ಹಾಗೂ ಸಂಘ ಸಂಸ್ಥೆಗಳ ಆಶ್ರಯದಲ್ಲಿ ಸತತವಾಗಿ ನಡೆದುಕೊಂಡು ಬಂದು ದಿನಾಂಕ 10–05–2014ರಂದು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಶ್ರೀ ಶಾರದಾ ಮಂಟಪದಲ್ಲಿ ಸಂಪನ್ನಗೊಂಡಿತು. ಶ್ರೀ ಬೆಳ್ಮಣ್ಣು ವಾಸುದೇವರಾವ್ ದಂಪತಿಗಳ ಕರ್ತೃತ್ವದಲ್ಲಿ ನಡೆದ ಈ ಹೋಮದಲ್ಲಿ ಸುಮಾರು 35000 ಆಹುತಿಯೊಂದಿಗೆ ಅಂದಿನ ಯಾಗ ಪೂರ್ಣಾಹುತಿಗೊಂಡಿತು. ಯಾಜಿ ಹೆಚ್. ನಿರಂಜನ್‌ಭಟ್ ಅವರ ನೇತೃತ್ವದಲ್ಲಿ ಶ್ರೀ ಶಿವಾನಂದ ಶ್ಯಾನುಭೋಗ್ ಅವರು ಪ್ರಧಾನ ಪುರೋಹಿತರಾಗಿ ಯಾಗ ನಡೆಸಿಕೊಟ್ಟರು. ಶ್ರೀ ಶ್ರೀಕಾಂತ ರಾವ್ ಹೆಜಮಾಡಿ ಸಹಕರಿಸಿದರು. ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶ್ರೀ ಶಶೀಂದ್ರ ರಾವ್ ಉಡುಪಿ ಉಪಸ್ಥಿತರಿದ್ದರು.

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ಪ್ರಫುಲ್ಲಚಂದ್ರ ರಾವ್, ಕಾರ್ಯದರ್ಶಿ ಶ್ರೀ ಅರವಿಂದಕುಮಾರ್ , ಕೋಶಾಧಿಕಾರಿ ಶ್ರೀ ಕೃಷ್ಣಮೂರ್ತಿ ರಾವ್, ಶ್ರೀ ಮಂಜುನಾಥ ಹೆಬ್ಬಾರ್ ಮೊದಲಾದವರು ಪಾಲ್ಗೊಂಡು ಯಾಗಕ್ಕೆ ಸಹಕರಿಸಿದರು. ಮಧ್ಯಾಹ್ನ ಬ್ರಾಹ್ಮಣ ಸುಹಾಸಿನೀ ಆರಾಧನೆಯು ನೆರವೇರಿತು.

## ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಶ್ರೀ ದುರ್ಗಾನಮಸ್ಕಾರ ಪೂಜೆ

ತಾ.6–4–2014ನೇ ಆದಿತ್ಯವಾರ ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯು ಸಂಪನ್ನ ಗೊಂಡಿತು. ಸಂಜೆ ಗಂಟೆ 5–00ರಿಂದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ದೀಪವಿಟ್ಟು, ಮಂಡಲ ರಚಿಸಿ ಪೂಜೆಯ ಶುಭಾರಂಭವಾಯಿತು. ಪೂಜಾ ಕರ್ತೃಗಳಾಗಿ ಕೊಕ್ರಾಡಿ ಶ್ರೀ ಸುರೇಶ್ ರಾವ್ ಕುತ್ಪಾಡಿ ದಂಪತಿಗಳು ಸಹಕರಿಸಿದರು. ಸಮಾಜದ ಸ್ವಾಧ್ಯಾಯ ತಂಡದವರಿಂದ ದುರ್ಗಾ ಸಪ್ತಶತೀ ಪಾರಾಯಣ ನಡೆಯಿತು. ಶ್ರೀಶಾರದಾ ದೇವಸ್ಥಾನದಲ್ಲಿ ಮಹಿಳೆಯರಿಂದ ಸಾಮೂಹಿಕ ಭಜನೆ, ಲಲಿತಾ ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ ನಡೆದವು.

ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ ಮುಗಿದು ರಾತ್ರಿ 8–00 ಗಂಟೆಗೆ ಮಹಾಪೂಜೆ ನೆರವೇರಿತು. ತೀರ್ಥ ಪ್ರಸಾದ ವಿತರಣೆ ಬಳಿಕ ಭೋಜನ ಪ್ರಸಾದ ನಡೆಯಿತು. ಈ ಸಾಮೂಹಿಕ ಪೂಜಾ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಹಾಗೂ ಪರಿಸರದ ಭಕ್ತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸೇವೆಯ ಧನ್ಯತೆಯನ್ನು ಪಡೆದರು.

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ವೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ


## ಚಿಂತನ

ದನಗಳ ಸಾಗಾಟದಲ್ಲಿದ್ದ ಒಬ್ಬಾತನ ಮೇಲೆ ನಕ್ಸಲ್ ನಿಗ್ರಹ ಪಡೆ ಗುಂಡು ಹೊಡೆದ ದೆಸೆಯಿಂದ ಆತ ಮರಣಹೊಂದಿದ ಬಗ್ಗೆ ವರದಿಯನ್ನು ಮಾಧ್ಯಮಗಳ ಮೂಲಕ ತಿಳಿದುಕೊಂಡಿದ್ದೇವೆ. ಹೇಗಾದರೂ ಪ್ರಾಣ ಕಳೆದುಕೊಂಡವನ ಬಗ್ಗೆ ಅನುಕಂಪ, ತಂದೆ-ತಾಯಿಗಳಿಗೆ ತಮ್ಮ ಪುತ್ರನ ಅಗಲುವಿಕೆ, ಬಂಧುಗಳಿಗೆ ಆತನ ಇಲ್ಲದಿರುವಿಕೆ ಮೊದಲಾದುವುಗಳಿಂದ ಆಗುವ ದುಃಖವನ್ನು ನಾವೂ ಒಪ್ಪಬೇಕಾದುದೇ ಆಗಿದೆ.

ನಾವು ತಿಳಿದಂತೆ ಒಂದು ಕೊಲೆ ನಡೆಯಬೇಕಾದರೆ ಮೂರು ಕಾರಣಗಳು ಪ್ರಾಮುಖ್ಯವಂತೆ. “ಲಾಭ-ಕಾಮ-ದ್ವೇಷ”. ಎಲ್ಲಿಯೋ ಇದ್ದ ನಕ್ಸಲ್ ನಿಗ್ರಹ ಪಡೆಯ ಯೋಧನೊಬ್ಬ ಈ ದನ ಸಾಗಾಟ ಮಾಡುವವನನ್ನು ಕೊಂದರೆ ಏನು ಲಾಭ ಪಡೆಯಲು ಸಾಧ್ಯ? ಕಾಮದ ವಿಚಾರವಂತೂ ಅಲ್ಲವೆಂಬುದನ್ನು ನಾವು ತಿಳಿದಿರುತ್ತೇವೆ. ಮತ್ತೆ ದ್ವೇಷದ ವಿಚಾರ. ಕಾಸರಗೋಡಿನವನಾದ ಈ ಅಪರಿಚಿತನಲ್ಲ ಆ ಯೋಧನಿಗೆ ಯಾವ ದ್ವೇಷವಿರಲು ಸಾಧ್ಯ?

ದನಗಳ ಸಾಗಾಟದ ಕಾರ್ಯ ಕಾನೂನಿನ ಮಿತಿಯೊಳಗೇ ನಡೆದಿದೆ ಎಂದಾದರೆ ಸಾಗಾಟ ಮಾಡುವವರು ಯಾಕೆ ಹೆದರಬೇಕು? ಈ ಅಧಿಕಾರಿಗಳ ಕೈಗೆ ಸಿಕ್ಕರೆ ಒಮ್ಮೆಗೆ ಅವರ ನಿಯಮದಂತೆ ದಸ್ತಗಿರಿಯೋ, ಬಂಧನಕ್ಕೋ ಒಳಗಾಗಿ ಮತ್ತೆ ಬೇಕಾದರೆ ರಾಜಕೀಯ ಬಳಸಿಯೋ ನ್ಯಾಯಾಂಗ ಹೋರಾಟದಲ್ಲಿಯೋ ಕಾನೂನಿನಂತೆ ಬಿಡುಗಡೆಗೊಳ್ಳಲಿ.ಅದಕ್ಕೆ ಬದಲಾಗಿ ಅಧಿಕಾರಿಗಳು ಪ್ರಶ್ನಿಸಿದಾಗ ರೊಚ್ಚಿಗೆದ್ದು, ಅವರು ಸಿಟ್ಟಿಗೇಳುವಂತೆ ಮಾಡುವ ಸಂಧರ್ಭವನ್ನು ಯಾಕೆ ಆಹ್ವಾನಿಸಿಕೊಳ್ಳಬೇಕು?

ನಮ್ಮ ರಾಜಕಾರಣಿಗಳೂ ಅಂತಹ ಸಂದರ್ಭದಲ್ಲಿ ಕೇವಲ ಒಂದು ಕೋಮಿನವರನ್ನು ಸಾಂತ್ವನಗೊಳಿಸುವ ರೀತಿಯಲ್ಲಿ ಯಾಕೆ ವರ್ತಿಸಬೇಕು? ಅಲ್ಲದೆ ಮಿಲಿಟರಿ ಕಾರ್ಯಾಚರಣೆಯಲ್ಲಿ ಪ್ರಾಣ ಕಳೆದುಕೊಂಡ ಯೋಧರಿಗೆ ಸಲ್ಲುವ ಪರಿಹಾರಧನಕ್ಕಿಂತಲೂ ಎರಡು ಪಟ್ಟು ಹೆಚ್ಚು ಪರಿಹಾರವನ್ನು ಪ್ರಕಟಿಸಿದ್ದಲ್ಲದೆ, ಗುಂಡು ಹೊಡೆದನೆಂದು ಹೇಳಿದ ಅಧಿಕಾರಿಯನ್ನು ಅಮಾನತು ಮಾಡಿ ಆತನ ವಿರುದ್ಧ ಕೊಲೆ ಕೇಸು ದಾಖಲಿಸಿದ್ದು ರಾಜಕೀಯದ ದುರ್ಬಲಕೆ ಎನ್ನಬೇಕೇ? ಈ ರಾಜಕಾರಣಿಗಳ ಇಂತಹ ಅನೈತಿಕ ನಡೆಯಿಂದ ನಮ್ಮ ರಕ್ಷಣಾ ವ್ಯವಸ್ಥೆಯೇ ನಂಬಿಕೆ ಕಳೆದುಕೊಳ್ಳುವ ದಿನಗಳು ಬಹುದೂರವಿಲ್ಲ ಎಂದು ತಿಳಿದುಕೊಳ್ಳೋಣವೇ?

# ಕನ್ನಡ ಕವಿಕಾವ್ಯ ಪರಿಚಯ-೧೦ : ಭಕ್ತ ಕವಿ ಕನಕದಾಸರು



– ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

(ಕಳೆದ ಸಂಚಿಕೆಯಿಂದ)

‘ನರೆದಲಗ’ ಎಂಬ ಹೆಸರಿನ ಚಿಕ್ಕ ಗಾತ್ರದ, ಕಪ್ಪು ಬಣ್ಣದ ಧಾನ್ಯವು ಬಡವ-ಬಲ್ಲಿದವರೆಲ್ಲರಿಗೂ ಪ್ರಿಯವಾದುದು ನಿರಂತರವಾಗಿ ನೀರುಣ್ಣುವ ಸಸ್ಯವಿದಲ್ಲ. ಸಾಮಾನ್ಯ ಒಣ ನೆಲದಲ್ಲೂ ಇದು ಬೆಳೆಯಿಸಲ್ಪಡುತ್ತದೆ. ಹಾಗಾಗಿ ಮರ್ಯಾದಾ ಪುರುಷೋತ್ತಮ ಶ್ರೀರಾಮ ಚಂದ್ರನು ಇದು ತನ್ನ ಹೆಸರಿನಿಂದಲೇ (ರಾಘವ) ಕರೆಯಲ್ಪಡಬೇಕು ಎಂಬ ಇರಾದೆಯಿಂದ ಇದಕ್ಕೆ ‘ರಾಗಿ’ ಎಂಬ ಹೆಸರಿಟ್ಟನು ದೇವರು ‘ಭಕ್ತಾರಾಧೀನ’ ‘ಭಕ್ತರ ಭಕ್ತ’ ಎನ್ನುವ ತತ್ವವು ‘ರಾಮಧ್ಯಾನ ಚರಿತ್ರೆ’ ಯಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಕಾಲ್ಪನಿಕ ಕಥೆಯಾದರೂ ಉತ್ತಮ ತತ್ವವನ್ನಿದು ಸಾರುತ್ತಿದೆ.

4 **ನಳಚರಿತ್ರೆ** : ಶ್ರೀಮದ್ರಾಮಾಯಣ, ಮಹಾಭಾರತಗಳೆರಡರಲ್ಲೂ ಶ್ರೀರಾಮನಿಗೆ ಮತ್ತು ಪಾಂಡವ ಜ್ಯೇಷ್ಠನಾದ ಯುಧಿಷ್ಠಿರನಿಗೆ ವನವಾಸ ಕಾಲದಲ್ಲಿ ಕಾಡಿನಲ್ಲಿ ಋಷಿ-ಮುನಿಗಳಿಂದ ಹೇಳಲ್ಪಟ್ಟ ಕತೆಯೇ ‘ನಳಚರಿತ್ರೆ’ ಸಂಸ್ಕೃತದ ಮಹಾಭಾರತವೇ ಇದಕ್ಕೆ ಆಕರ ಗ್ರಂಥವಾಗಿದ್ದು, ವನಪರ್ವದ 28 ಅಧ್ಯಾಯನಗಳ ನಳೋಪಾಖ್ಯಾನವೇ ಈ ಗ್ರಂಥಕ್ಕೆ ಮೂಲವಾಗಿದೆ. ಕಾರಣಾಂತರದಿಂದ ಶನಿಮಹಾರಾಜನ ವಕ್ರದೃಷ್ಟಿಗೆ ತುತ್ತಾದ ನಳಚಕ್ರವರ್ತಿಯು ರಾಜ್ಯ ಸರ್ವಸ್ವವನ್ನೂ ತೊರೆದು ಮಡದಿಯೊಂದಿಗೆ ಅರಮನೆಯಿಂದ ಹೊರಟು, ಮುದ್ದಿನ ಮಕ್ಕಳಿಬ್ಬರನ್ನು ಅವರ ಅಜ್ಜನ ಮನೆಗೆ ಕಳುಹಿಸಿ ಅರಣ್ಯ ಪಾಲಾಗುತ್ತಾನೆ. ಮುಂದೆ ಅಲ್ಲಿ ತನ್ನ ಮನದನ್ನೆಯನ್ನೂ ಉಳಿದು, ಏಕಾಂಗಿಯಾಗಿ ಸಾಗಿ, ಕಾರ್ಕೋಟಕನೆಂಬ ಕಾಳಸರ್ಪದ ವಿಷಕ್ಕೆ ತುತ್ತಾಗಿ ಸ್ಮರನಂತಹ ದೇಹಸೌಂದರ್ಯವನ್ನು ಕಳೆದು ವಿಕಾರ ರೂಪಿಯಾಗಿ ಅಯೋಧ್ಯಾಧಿಪತಿ ಋತುಪರ್ಣನಲ್ಲಿ ‘ಬಾಹುಕ’ನೆಂಬ ಹೆಸರಿನಿಂದ ಕುದುರೆಗಾಹಿಯಾಗಿ ಸೇರುತ್ತಾನೆ. ಮುಂದೆ ಶುಭಕಾಲವೊದಗಿ ತನ್ನ ಮಾವನ ಮನೆಯಲ್ಲಿಯೇ ಸತಿ-ಪುತ್ರ, ಪುತ್ರಿಯರ ಸಮಾಗಮವಾಗಿ ಮುನ್ನಿನ ರೂಪವನ್ನೂ ರಾಜ್ಯವನ್ನೂ ಪಡೆಯುತ್ತಾನೆ; ಕತೆಯು ಸುಖಾಂತ ವಾಗಿದೆ.

ವರಪುರದ ಚೆನ್ನಿಗರಾಯನ ಅಂಕಿತವಾಗಿ ಹೇಳಿದ ಸೊಗಸಾದ ಭಾಮಿನಿ ಷಟ್ಪದಿಯ ಕಾವ್ಯವಿದು ಇದರಲ್ಲಿ ಭಕ್ತಿ ಸುಧೆಯು ಪುಟಿದೇಳುವುದನ್ನು ಕಾಣಬಹುದು. "ಮುನ್ನ ಮಾಡಿದ ಕರ್ಮಫಲವಿದು ಬೆನ್ನಬಿಡುವುದೆ," ‘ಪನ್ನಗಾರಿಧ್ವಜನ ಕೃಪೆ ತನಗಿನ್ನು ತಪ್ಪಿದ ಬಳಿಕ’ ‘ಕಾಲಮಾವನ ಕೀಳು ಮಾಡದು ಶೂಲಪಾಣಿಯೆ ಬಲ್ಲ’ ಮುಂತಾಗಿ ದೇವರನ್ನು ನೆನೆಯುವುರೊಂದಿಗೆ ‘ಅರ್ಥಾಂತರನ್ಯಾಸ’ಗಳನ್ನು ಕಾಣಬಹುದು. ಕಾಡಿನಲ್ಲಿ ನಳನ ದೃಷ್ಟಿಗೋಚರವಾದ ಕಾಳ್ಗಿಚ್ಚಿನ ವರ್ಣನೆ ಇಂತಿದೆ:-

*“ಬಿದಿರ ಮಳೆ ಧಗಧಗಿಸೆ ಘನಹೆ-।*
*ಬಿದ್ದಿರು ಛಟಛಟಯೆನಲು ಉರಿಯೊಳು।*
*ಕದಳಿಗಳು ಸಿಮಿಸಿಮಿಸೆ ತರುಗಳನುರುಹಿ*
*ಮೆಳೆಗಳೊಳು॥*
*ಗದಗದಿಸೆ ಗುಹೆಗಳಲಿ ಮೃಗತತಿ।*
*ಬೆದರಿ ಹಾಯ್ದುವು ಪಕ್ಷಿಸಂಕುಲ।*
*ಮುದುರಿದುವು ಗರಿಸಹಿತ ಬೆಂದಾ ವನದ*
*ಮಧ್ಯದಲಿ॥”*

ಅನುಕಣಾವ್ಯಯಗಳನ್ನು ಈ ಪದ್ಯದಲ್ಲಿ ಕಾಣಬಹುದು. ಹಾಗೆಯೇ ಸ್ವಭಾವೋಕ್ತಿಗೆ ಉದಾಹರಣೆಯಾಗಿ, ಕಾರ್ಕೋಟಕನೆಂಬ ಕಾಳಸರ್ಪದಿಂದ ಕಡಿಯಲ್ಪಟ್ಟ ನಳನ ದೇಹಕಾಂತಿಯು ಕೆಟ್ಟು ವಿಕಾರ ರೂಪಿ-

*“ಅಡ್ಡ ಮೋರೆಯ ಗಂಟು ಮೂಗಿನ।*
*ಜಡ್ಡು ದೇಹದ ಗುಜ್ಜುಗೋರಲಿನ।*
*ಗಿಡ್ಡ ಕೈಕಾಲುಗಳ ಉದುರಿದ*
*ರೋಮಮೀಸೆಗಳ*
*ದೊಡ್ಡ ಹೊಟ್ಟೆಯ ಗೂನು ಬೆನ್ನಿನ*
*ಗಿಡ್ಡ ರೂಪಿನ ಹರಕು ಗಡ್ಡದ।*
ಹೆಡ್ಡನಾದ ಕುರೂಪಿ ತನದಲಿ ನೃಪತಿ
ವಿಷದಿಂದ॥”

ಈ ಪದ್ಯವು ಸ್ವಭಾವೋಕ್ತಿಗೆ ಉತ್ತಮ ಉದಾಹರಣೆಯಾಗಿದೆ. ‘ತಮದ ರಾಹುಗ್ರಹವು ಸೋಂಕಿದ ದ್ಯುಮಣಿಯಂತಿರೆ’ ‘ಹೊಲಬು ದಪ್ಪಿದ ಹುಲ್ಲೆ ಬೇಡನ ಬಲೆಗೆ ಬಿದ್ದಂತಾದನು’ ಮುಂತಾದ ಸುಂದರವಾದ ಅಲಂಕಾರಗಳಿಗೆ ಕಾಲಪುರುಷನ ಕಾಟದಿಂದ ರಾಜ್ಯಭ್ರಷ್ಟನಾಗಿ ಕೊನೆಗೆ ಸತ್ಯಕ್ಕೆ ಜಯವೆಂಬಂತೆ ನಳನು ಸುಖಾಂತವನ್ನು ಕಾಣುವ, ದಮಯಂತಿಯ ಪಾತಿವ್ರತ್ಯವನ್ನು ಸಾರುವ ಸುಂದರವಾದ ಕಥಾನಕವಿದು, ‘ಅರಸ’ ಎಂಬ ಅರ್ಥ ಕೊಡುವ ‘ನೃಪತಿ’ ‘ಪೊಡವಿಪತಿ’ ‘ಪೃಥ್ವಿಪತಿ’ ಮುಂತಾದ ಅರುವತ್ತು ಪದಗಳನ್ನು ಕವಿ ಈ ಕಾವ್ಯದಲ್ಲಿ ಬಳಸಿದ್ದಾನೆ. ‘ನೃಪ’ ಎಂಬ ಪದವು 130ಕ್ಕಿಂತಲೂ ಹೆಚ್ಚು ಬಾರಿ ಆವರ್ತವಾಗಿದೆ. ಪಂಡಿತ ಪಾಮರರೆಲ್ಲರ ಮೆಚ್ಚುಗೆಗೆ ಪಾತ್ರವಾದ ಕಾವ್ಯ ಇದಾಗಿದೆ.

**ಶ್ರೀ ನೃಸಿಂಹಸ್ತವ** :- ಸಾಂಗತ್ಯ ಛಂದಸ್ಸಿನಲ್ಲಿ ಬರೆಯಲ್ಪಟ್ಟಿರುವ ಚಿಕ್ಕಗ್ರಂಥವು ಇದಾಗಿದೆ. ಒಟ್ಟಿನಲ್ಲಿ ಕನಕದಾಸರು ಕೀರ್ತನಕಾರ ಮಾತ್ರವಲ್ಲ ಶ್ರೇಷ್ಠ ಕವಿಯೂ ಆಗಿದ್ದು 98 ವರ್ಷಗಳ ತುಂಬು ಜೀವನ ನಡೆಸಿ, ತಿರುಪತಿ, ಬೇಲೂರು, ಉಡುಪಿ, ಕಾಗಿನೆಲೆಗಳಲ್ಲಿ ನೆಲಸಿದ್ದು ಕೊನೆಗೆ ಕಾಗಿನೆಲೆಯ ಆದಿಕೇಶವನ ಸನ್ನಿಧಿಯಲ್ಲಿ ತನ್ನ ಶಾಶ್ವತ ನೆಲೆಯನ್ನು ಸೇರಿದರು.

### ನಾ ಕಂಡ ಭಗವಂತ

ಕಂಡೆ ನಾ ಭಗವಂತನ
ಕಂಡೆನು ಆ ದಿವ್ಯರೂಪವ ॥
ಸಜ್ಜನರ ಪ್ರೀತಿ ತುಂಬಿದ
ನಗುವಿನಲಿ ನಾ ಕಂಡೆ
ಮುಗ್ಧ ಮುಗುವಿನ ತೊದಲ
ನುಡಿಯಲಿ ನಾ ಕಂಡೆ ॥ ೧ ॥
ಶ್ರಮ ಜೀವಿಯ ಸತತ
ದುಡಿಮೆಯಲಿ ನಾ ಕಂಡೆ
ಮುದಿ ಜೀವದ ಅಸಹಾಯಕ
ನೋಟದಲಿ ನಾ ಕಂಡೆ ॥ ೨ ॥
ಯೋಗ್ಯರಿಗೆ ಸಹಾಯ ಮಾಡುವವರ
ತುಂಬು ಹೃದಯದಲಿ ನಾ ಕಂಡೆ
ಭಗವಂತನ ನಾನಾ ರೂಪವ
ಆ ದಿವ್ಯರೂಪದಲಿ ನಾ ಕಂಡೆ ॥ ೩ ॥

**–ಸೌಮ್ಯ ವಸಂತ (ಗೋವಾ)**

### ನಾದಮಯಾ

ನಾದಮಯಾ ಎಲ್ಲವೂ ನಾದಮಯ
ಬೀಸುವ ಗಾಳಿಯ
ಸುರಿವ ಸೋನೆಯ
ಸರಿಯುವ ಅಲೆಯಾ
ಉಲಿಯುವ ಮುರಲಿಯ
ಒಲೆಯುವ ಬಳ್ಳಿಯ
ಕಿಲಿಕಿಲಿ ಹಕ್ಕಿಯ ಕರೆಯಾ
ಗಗನದ ಚುಕ್ಕಿಯ
ಮುಗಿಲಿನ ಹಕ್ಕಿನ
ನಗುವೇ ನಾದಮಯಾ
ಗಗನದ ಪಕ್ಷಿಯ
ಹಗಲಿನ ಅಕ್ಷಿಯ
ಬಗೆಯೇ ನಾದಮಯ
ಜಿಗಿಯುವ ಜಿಂಕೆಯ
ನೆಗೆಯುವ ಭೃಂಗಿಯ
ಉಗಿಬಂಡಿಯ ಹೊಗೆಯ
ಒಲಿಯುವ ನಾರಿಯ
ಚಲಿಸುವ ಪೃಥ್ವಿಯ
ಸಲಿಲವೂ ನಾದಮಯಾ
ಜಿಗಿದ ದಾಂಗುಡಿಯ
ಝುಗಝುಗಿಸಿದ ಕಳೆಯ
ಜಗವೇ ನಾದಮಯಾ।

**– ಸಾವಿತ್ರಿ ಮನೋಹರ್**

# ಕಾಂತಮಂಗಲದಲ್ಲಿ ದೃಢ ಸಂಪ್ರೋಕ್ಷಣ

ಸುಳ್ಯ ತಾಲೂಕು ಅಜ್ಜಾವರ ಗ್ರಾಮದ ಕಾಂತಮಂಗಲ ಶ್ರೀ ಸುಬ್ರಹ್ಮಣ್ಯ ದೇವರ ಬ್ರಹ್ಮಕಲಶಾ ನಂತರ ನಡೆಯುವ ದೃಢ ಸಂಪ್ರೋಕ್ಷಣಾ ವಿಧಿಯು ದಿನಾಂಕ 11-05-2014ರಂದು ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ವಿಧಿಗಳೊಂದಿಗೆ ನೆರವೇರಿತು. ಸಂಜೆ 4 ಗಂಟೆಗೆ ಶ್ರೀ ಅಜ್ಜಾವರ ಶಿವರಾವ್ ಬಯಂಬು ಅವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಸುಳ್ಯದ ಶಾಸಕರಾದ ಶ್ರೀ ಎಸ್.ಅಂಗಾರ ಶ್ರೀ ದೇವಳದ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರು ಧಾರ್ಮಿಕ ಉಪನ್ಯಾಸ ನೀಡಿದರು. ಬ್ರಹ್ಮಕಲಶೋತ್ಸವ ಸಮಿತಿ ಹಾಗೂ ಜೀರ್ಣೋದ್ಧಾರ ಸಮಿತಿಯ ಉಸ್ತುವಾರಿಯಲ್ಲಿ ನಡೆದ ಈ ಎಲ್ಲಾ ಕಾರ್ಯಕ್ರಮಗಳು ಭಕ್ತಾದಿಗಳ ಸಹಕಾರದಿಂದ ಸಂಪನ್ನಗೊಂಡಿತು.


**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು** : ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಶ್ರೀ ಪ್ರಫುಲ್ಲಚಂದ್ರರಾವ್ ಉಡುಪಿ, ಶ್ರೀ ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ವೆ ಗೋಪಾಲಕೃಷ್ಣ ರಾವ್, ಯು ಅರವಿಂದ ಕುಮಾರ್ ಮಣಿಪಾಲ

# ಬೆಳ್ಮಣ್ಣು ಬೈಲುಮನೆ ವಂಶವೃಕ್ಷ ಬಿಡುಗಡೆ



"ಬೆಳ್ಮಣ್ಣು ಬೈಲುಮನೆ ಕುಟುಂಬಿಕರ ತ್ಯಾಗ, ಪ್ರೀತಿ, ವಿಶ್ವಾಸ, ಸರಳ ಸಜ್ಜನಿಕೆ ಗುಣಗಳಿಂದ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದು ಮುಂದಿನ ಪೀಳಿಗೆಗೆ ಅವರ ಆದರ್ಶಗಳು ದಾರಿದೀಪವಾಗಬೇಕು. ಈ ನಿಟ್ಟಿನಲ್ಲಿ ಬೈಲುಮನೆ ದೇವರಾಯರು ಕೈಬರಹದಲ್ಲಿ ಸಂಗ್ರಹಿಸಿರುವ ಅಪೂರ್ವ ಮಾಹಿತಿಯಿರುವ ಬೈಲುಮನೆ ವಂಶವೃಕ್ಷ "ವೆಂಕಟೇಶ್ ಮತ್ತು ಅಮ್ಮಕ್ಕ" ಕಿರುಹೊತ್ತಗೆಯನ್ನು ಬಿಡುಗಡೆ ಗೊಳಿಸುವುದು ನನ್ನ ಪಾಲಿನ ಭಾಗ್ಯ" ಎಂದು ಮುಂಬಯಿಯ ಪ್ರಸಿದ್ಧ ವೈದ್ಯ ಮತ್ತು ಬೈಲುಮನೆ ಕುಟುಂಬದೊಂದಿಗೆ ಅವಿನಾಭಾವ ಸಂಬಂಧ ಹೊತ್ತಿರುವ ಡಾ। ಪಿ. ಜಿ. ರಾವ್ ಅವರು "ತಾನು ಬಾಲಕನಾಗಿದ್ದಾಗ ಬೈಲುಮನೆಯ ಹಿರಿಯರೊಂದಿಗಿನ ಒಡನಾಟವನ್ನು ಸ್ಮರಿಸಿ ಈ ಪರಂಪರೆ ಮುಂದುವರಿಯಲಿ" ಎಂದು ವಾಸುದೇವ ರಾವ್ ಸಹೋದರರು ಮತ್ತು ದೇವರಾವ್ ಮಕ್ಕಳನ್ನು ಅಭಿನಂದಿಸಿದರು.

ಅವರು ಬೆಳ್ಮಣ್ಣು ಬೈಲುಮನೆಯಲ್ಲಿ ಸರಳ ಸಮಾರಂಭದಲ್ಲಿ ವಂಶವೃಕ್ಷ-2014ನ್ನು ಲೋಕಾರ್ಪಣೆ ಮಾಡಿ ಶುಭಕೋರಿದರು. ಬೈಲುಮನೆ ಕುಟುಂಬದ ಹಿರಿಯರಾದ ಬೆಳ್ಮಣ್ ವಾಸುದೇವರಾವ್ ಅಧ್ಯಕ್ಷತೆ ವಹಿಸಿದ್ದರು. ಬೆಳ್ಮಣ್ಣು ಆನಂದ ರಾವ್, ಬಿ.ಹರೀಶ್‌ಚಂದ್ರ ರಾವ್, ಎನ್. ಭುಜಂಗ ರಾವ್, ಎನ್. ಚಂದ್ರಶೇಖರ ರಾವ್, ಬಿ. ವಿಜಯಕುಮಾರ್, ವೈ. ಪ್ರವೀಣ್ ರಾವ್, ವಿಶೇಷ ಅಭ್ಯಾಗತರಾಗಿ ಭಾಗವಹಿಸಿದರು. ಬೈಲುಮನೆ ಕುಟುಂಬದ ಮುಖ್ಯ ಶಿಕ್ಷಕ ವಿ.ಕೆ. ರಾವ್ ಸ್ವಾಗತಿಸಿದರು. ಚಿತ್ರಾಪುರ ರಾಘವೇಂದ್ರ ರಾವ್ ವಂದಿಸಿದರು. ನಂದಳಿಕೆ ಬಾಲಚಂದ್ರ ರಾವ್ ಶುಭ ಕೋರಿದರು.

## ಅಭಿನಂದನೆಗಳು

### ಕೆ. ಸುಪ್ರಿಯಾ ರಾವ್



ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ವಿದ್ಯಾರ್ಥಿನಿ, ಉಡುಪಿ ಕುಕ್ಕಿಕಟ್ಟೆಯ ಶ್ರೀ ಗಣೇಶ್ ಕೆ.ಆರ್. ಹಾಗೂ ಶ್ರೀಮತಿ ಸುಧಾ ರಾವ್ ಇವರ ಪುತ್ರಿ (ಕುಂಜಾರು ರಮಾ ದೇವಿ ಅವರ ಮೊಮ್ಮಗಳು) ಕು। ಕೆ. ಸುಪ್ರಿಯಾ ರಾವ್ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 600ರಲ್ಲಿ 582 (97%) ಅಂಕಗಳನ್ನು ಗಳಿಸಿದ್ದಾಳೆ. ಗಣಿತದಲ್ಲಿ 100, ರಸಾಯನ ಶಾಸ್ತ್ರದಲ್ಲಿ 99, ಭೌತಶಾಸ್ತ್ರದಲ್ಲಿ 98 ಅಂಕ ಪಡೆದ ಈಕೆ ಕ್ರೀಡಾ ಚಟುವಟಿಕೆಗಳಲ್ಲೂ ಭಾಗವಹಿಸಿದ್ದಳು. ಕು। ಸುಪ್ರಿಯಾಳ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಪ್ರಗತಿ ಭಂಡಿ ಪೆರ್ಡೂರು



2013-14 ಸಾಲಿನ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಪ್ರಗತಿ ಭಂಡಿ ಪೆರ್ಡೂರು 95% ಅಂಕ ಪಡೆದು, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಶಾಸ್ತ್ರದಲ್ಲಿ ತಲಾ 97 ಹಾಗೂ ಜೀವಶಾಸ್ತ್ರದಲ್ಲಿ 99 ಅಂಕಗಳನ್ನು ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾಳೆ. ಸಿಂಡಿಕೇಟ್ ಬ್ಯಾಂಕ್ (Inspection Dept. R.I Head office) ನ ಮೆನೇಜರ್ ಶ್ರೀ ರವೀಂದ್ರ ಭಂಡಿ ಹಾಗೂ ಶ್ರೀಮತಿ ವಾಣಿರಾವ್‌ರವರ ಪುತ್ರಿಯಾದ ಕು। ಪ್ರಗತಿ ಭಂಡಿಯವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ರಾಕೇಶ್ ರಾವ್ ಟಿ., ಉಡುಪಿ



ಉಡುಪಿಯ ಅಡ್ಕದಕಟ್ಟೆಯಲ್ಲಿ ವಾಸ್ತವ್ಯದಲ್ಲಿರುವ ಪೂರ್ಣಪ್ರಜ್ಞ ಕಾಲೇಜಿನ ವಿದ್ಯಾರ್ಥಿ ರಾಕೇಶ್ ರಾವ್ 2013-14ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ, ಗಣಿತದಲ್ಲಿ ಪಡೆದ 100 ಅಂಕಗಳು ಸೇರಿದಂತೆ ಒಟ್ಟು ಶೇ. 91.8ರಷ್ಟು ಅಂಕಗಳನ್ನು ಪಡೆದಿರುತ್ತಾನೆ. ಇವನು ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯ ಸದಸ್ಯರಾಗಿರುವ ಶ್ರೀ ತಂತ್ರಾಡಿ ಜಗದೀಶ ರಾವ್ ಹಾಗೂ ಶ್ರೀಮತಿ ಸುಂದರಿಯವರ ಪುತ್ರ. ಈತನ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಶುಭ ಪ್ರಯಾಣ



**ತಾ.16-05-2014ರಂದು ಬೆಂಗಳೂರಿನಿಂದ ಹೊರಟು ಎರಡು ವಾರಗಳ ಕಾಲ ಪೂರ್ವ ಹಾಗೂ ಪಶ್ಚಿಮ ಅಮೇರಿಕಾದ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಕೈಗೊಳ್ಳುತ್ತಿರುವ**

**ಅಂಬಲಪಾಡಿಯ ಶ್ರೀ ಎಚ್.ಎನ್. ಶಾನುಭೋಗ್**

ಹಾಗೂ

**ಶ್ರೀಮತಿ ಮಹಾಲಕ್ಷ್ಮೀ ಶಾನುಭೋಗ್**

ಇವರಿಗೆ ಶುಭಕೋರುವ

ಸಿ.ಎ. ಕಿರಣ ಶಾನುಭೋಗ್ (ಮಗ)
ಶ್ರೀಮತಿ ಅನ್ನಪೂರ್ಣ ಶಾನುಭೋಗ್ (ಸೊಸೆ)
ಶ್ರೀ ಕಿರಣ ಕುಮಾರ್ ಎಂ (ಅಳಿಯ)
ಶ್ರೀಮತಿ ಕೀರ್ತಿ ಕೆ. ರಾವ್ (ಮಗಳು)
ಕು। ಅನನ್ಯ, ಮಾ। ಅನಿರುದ್ಧ್
ಹಾಗೂ ಬಂಧು ಮಿತ್ರರು.

## ಶುಭ ವಿವಾಹ ಮತ್ತು ಆರತಕ್ಷತೆಯ ಸಂಭ್ರಮ



### ಚಿ। ಅಶ್ವಿನ್ ಕುಮಾರ್ ಮತ್ತು ಚಿ। ಸೌ। ಚೈತ್ರ

ದಿನಾಂಕ 13-04-2014ನೇ ಆದಿತ್ಯವಾರ ಕಟಪಾಡಿ ಎಮ್.ಆರ್. ಮೆಮೋರಿಯಲ್ ಹಾಲ್‌ನಲ್ಲಿ ಋತುಗಳ ರಾಜ ವಸಂತನ ಆಗಮನದೊಂದಿಗೆ, ಕೋಗಿಲೆಯ ಕುಹೂ... ಕುಹೂ ..... ಎಂಬ ಮಧುರವಾದ ಮಂಜುಳ ಗಾನದೊಂದಿಗೆ, ಗುರುಹಿರಿಯರ ಆಶೀರ್ವಾದದೊಂದಿಗೆ, ಹಾಗೂ ದೇವತಾನುಗ್ರಹದೊಂದಿಗೆ ಪವಿತ್ರ ಸಪ್ತಪದಿ ತುಳಿದು ವೈವಾಹಿಕ ಜೀವನಕ್ಕೆ ಕಾಲಿಟ್ಟ ನವಜೋಡಿ ಚಿ। ಅಶ್ವಿನ್ ಕುಮಾರ್ (ಶ್ರೀಮತಿ ಪ್ರಸನ್ನ ಕುಮಾರಿ ಮತ್ತು ಕರ್ವಾಲು ಶ್ರೀ.ಕೆ.ಅನಂತಪಟ್ಟಾಭಿರಾವ್ ಇವರ ಸುಪುತ್ರ) ಮತ್ತು ಚಿ।ಸೌ।ಚೈತ್ರ (ಶ್ರೀಮತಿ ಶ್ಯಾಮಲಾ ಮತ್ತು ಇನ್ನಾ ಶ್ರೀ ಭಾಸ್ಕರರಾಯರ ಪುತ್ರಿ) ಇವರಿಗೆ ಅಪಾರಸಂಖ್ಯೆಯಲ್ಲಿ ಆಗಮಿಸಿ ಶುಭವನ್ನು ಹಾರೈಸಿ ಈ ಮಂಗಳ ಮಹೋತ್ಸವಕ್ಕೆ ಶೋಭೆ ತಂದ ಬಂಧು ಮಿತ್ರರಿಗೆ ನಮ್ಮ ಸಹಸ್ರ ನಮನಗಳು.

ಅದೇ ದಿನ ರಾತ್ರಿ ನೂತನ ದಂಪತಿಗಳೆಂಬ ಮರಕ್ಕೆ ಅಕ್ಷತೆ ಎಂಬ ನೀರನ್ನು ಸುರಿದು ಹೂ ಹಣ್ಣುಗಳಿಂದ ತುಂಬಿ ತುಳುಕುವಂತೆ ಮಾಡಿ ಹರಸಲು ಬಂದು 'ಆರತಕ್ಷತೆ' ಕಾರ್ಯಕ್ರಮಕ್ಕೆ ಮೆರಗನ್ನಿತ್ತ ಸಹೃದಯ ಬಂಧು ಮಿತ್ರರಿಗೆ ತುಂಬು ಹೃದಯದ ಕೃತಜ್ಞತೆಗಳು.

'ಮುಗಿಲಿಗೆ ನಕ್ಷತ್ರ ಮಾಲೆ' ಶೇಷನಿಗೆ ಹೆಡೆಯಮಣಿ ಹಾಗೂ 'ಹೆಮ್ಮರಕ್ಕೆ ಹೂಬಳ್ಳಿ' ಚಂದ. ಹಾಗೆಯೇ ವಿವಾಹ ಮಹೋತ್ಸವಕ್ಕೆ ಮನೋರಂಜನಾ ಕಾರ್ಯಕ್ರಮ ಚಂದ.

ದಿನಾಂಕ 14-04-2014ನೇ ಸೋಮವಾರ ರಾತ್ರಿ ಕರ್ವಾಲಿನ ಶ್ರೀ ಅನಂತಮತಿ ಹಿರಿಯ ಪ್ರಾಥಮಿಕ ಶಾಲೆಯ "ಶ್ರೀ ವಿಷ್ಣುಕಲಾ ಮಂದಿರದಲ್ಲಿ ಏರ್ಪಡಿಸಿದ 'ಸಂಗೀತ ವೈವಿಧ್ಯ' ಹಾಗೂ ಪಡುಬಿದ್ರಿ ಗಣಪತಿ ಪ್ರೌಢಶಾಲಾ ಹಳೆ ವಿದ್ಯಾರ್ಥಿ ಸಂಘದ ಸದಸ್ಯ - ಸದಸ್ಯೆಯರಿಂದ ಜರಗಿದ 'ನೃತ್ಯ ಸಿಂಚನ' ಮತ್ತು 'ಈ ಪೊಣ್ಣು ಏರ್???' ಎಂಬ ತುಳು ಹಾಸ್ಯಮಯ ನಾಟಕಕ್ಕೆ ಸಹಸ್ರ ಸಂಖ್ಯೆಯಲ್ಲಿ ಆಗಮಿಸಿದ ಕಲಾಭಿಮಾನಿಗಳಿಗೆ, ಭೋಜನಕೂಟದಲ್ಲಿ ಭಾಗವಹಿಸಿದ ಎಲ್ಲಾ ಆತ್ಮೀಯರಿಗೆ ಸಭಾಕಾರ್ಯಕ್ರಮಕ್ಕೆ ಮೆರುಗನ್ನಿತ್ತ ಗಣ್ಯ ವ್ಯಕ್ತಿಗಳಿಗೆ, ಪಡುಬಿದ್ರಿ ಗಣಪತಿ ಪ್ರೌಢಶಾಲಾ ಮಹನೀಯರಿಗೆ, ಕಲಾವಿದರಿಗೆ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಬಂಧು ಮಿತ್ರರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದಲ್ಲದೆ, 'ಈ ಪೊಣ್ಣು ಏರ್???' ನಾಟಕ 'ಭಾರಿ ಪೊರ್ಲುಡು ಗೊಬ್ಬಾದೆರ್ ನನಲಾ ... ನನಲಾ ... ತೂವೊಡು ಪಂಡ್ದ್ ಆಪುಂಡು' ಎಂದು ನುಡಿಯುತ್ತಾ ತೆರಳಿದ ಊರಿನ ಕಲಾಭಿಮಾನಿಗಳಿಗೆ ಹೃದಯಾಂತರಾಳದ ಕೃತಜ್ಞತೆಗಳು.

ಶ್ರೀಮತಿ ಪ್ರಸನ್ನ ಕುಮಾರಿ ಮತ್ತು ಕೆ.ಅನಂತಪಟ್ಟಾಭಿರಾವ್ ಕರ್ವಾಲು
ಶ್ರೀಮತಿ ಶ್ಯಾಮಲಾ ಮತ್ತು ಇನ್ನಾ ಭಾಸ್ಕರರಾವ್
ಶ್ರೀಮತಿ ರಶ್ಮಿ ಮತ್ತು ಕೆ.ಆದರ್ಶ ಕುಮಾರ್ ಕರ್ವಾಲು

# ರಾಷ್ಟ್ರೀಯ ಏಕತೆಯ ಹರಿಕಾರ ಶ್ರೀ ಆದಿಶಂಕರಾಚಾರ್ಯರು



ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು
ಭಂಡಾರ್ಕಾರ್ಸ್ ಕಾಲೇಜು, ಕುಂದಾಪುರ

**ನಮ್ಮ ದೇಶ**ದ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿದ ಮಹಾಮಹಿಮರಲ್ಲಿ ಋಷಿಗಳು, ದಾರ್ಶನಿಕರು ಮತ್ತು ತತ್ವಜ್ಞಾನಿಗಳ ಸಂಖ್ಯೆ ಬಹಳ ದೊಡ್ಡದು. ಅವರು ತಮ್ಮ ದೇಶ, ಕಾಲ, ಬದುಕು ಮುಂತಾದ ಭೌತಿಕ ಅಂಶಗಳಿಂದ ಭಾರತದ ಚರಿತ್ರೆಯ ಪುಟಗಳನ್ನು ತುಂಬಲು ಬಯಸಲಿಲ್ಲ. ಆದರೆ ಅವರ ಚೇತನ ಜೀವಂತವಾಗಿ ನಮ್ಮ ಸುತ್ತಮುತ್ತಲೂ ಇದೆ. ಅವರ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ಅವರ ಕೃತಿಗಳೇ ನಿದರ್ಶನವಾಗಿ ನಿಲ್ಲುತ್ತವೆ. ಅವರ ಪರಿಶುದ್ಧ ಜೀವನ ಈ ನೆಲದ ಸಂಸ್ಕೃತಿಯ ಹೃದಯವನ್ನು ತೆರೆದು ತೋರಿಸುತ್ತದೆ. ಅಂತಹವರ ಸಾಲಿನಲ್ಲಿ ಶ್ರೀ ಆದಿಶಂಕರಾಚಾರ್ಯರು ಅಗ್ರಮಾನ್ಯರು.

ಈ ದೇಶ ಧರ್ಮ, ಸಂಸ್ಕೃತಿ, ತತ್ವ, ರಾಜಕೀಯ ಮೊದಲಾದ ಕ್ಷೇತ್ರಗಳಲ್ಲಿ ಆಂತರಿಕ ಕ್ಷೋಭೆಗೆ ತುತ್ತಾಗಿ ಮಹಾತ್ಮರೊಬ್ಬರ ಅವತಾರಕ್ಕಾಗಿ ಪರಿತಪ್ಪಿಸುತ್ತಿದ್ದಾಗ ಶ್ರೀಶಂಕರರ ಅವತಾರವಾಯಿತು. ಅವರ ತಂದೆ ಶಿವಗುರು; ತಾಯಿ ಆರ್ಯಾಂಬೆ. ಅವರು ದೈವಾನುಗ್ರಹದಿಂದ ಪಡೆದ ಮಗ. ಕೇರಳದ ಪೂರ್ಣಾನದಿಯ ದಡದಲ್ಲಿರುವ ಕಾಲಟಿ ಅವರ ಹುಟ್ಟೂರು. ಕ್ರಿ.ಶ.೩೮೮ ರಿಂದ 420 ವರೆಗಿನ ಮೂವತ್ತೆರಡು ವರ್ಷದ ಅಲ್ಪಾವಧಿ ಅವರ ಜೀವಿತ ಕಾಲ.

## ಬಾಲ್ಯ–ವಿದ್ಯಾಭ್ಯಾಸ

ಶಂಕರರಿಗೆ ಐದು ವರ್ಷಕ್ಕೆ ಉಪನಯನವಾಯಿತು. ಅನಂತರ ಗುರುಕುಲವಾಸ. ಅಲ್ಲಿಯ ನಿಯಮದಂತೆ ಭಿಕ್ಷಾನ್ನದಿಂದಲೇ ಜೀವನ. ಒಮ್ಮೆ ಬಾಲಶಂಕರರು ಊರ ಮಹಿಳೆಯೊಬ್ಬಳ ಮನೆಗೆ ಭಿಕ್ಷೆಗೆ ಹೋದರು. 'ಭವತಿ ಭಿಕ್ಷಾಂದೇಹಿ' ಎಂದರು. ಬಾಲಬ್ರಹ್ಮಚಾರಿಗೆ ಒಂದು ಮುಷ್ಟಿ ಭಿಕ್ಷೆ ನೀಡಲೂ ಸಾಧ್ಯವಾಗದಷ್ಟು ಬಡತನ ಅವಳದು. ಆದುದರಿಂದ ದೈನ್ಯಭಾವ, ಕಣ್ಣಲ್ಲಿ ನೀರು. ಕೊನೆಗೆ ತುಂಬ ಸಂಕೋಚದಿಂದ ಮನೆಯ ಮೂಲೆಯಲ್ಲಿದ್ದ ಒಂದು ಒಣಗಿದ ನೆಲ್ಲಿಕಾಯನ್ನು ತಂದು ಅದನ್ನೇ ಶಂಕರರಿಗೆ ಭಿಕ್ಷೆಯಾಗಿ ಅರ್ಪಿಸಿದಳು. ದೀನಳೂ ಪರಿಶುದ್ಧ ಹೃದಯಳೂ ಆದ ಆ ಸಾಧ್ವೀಮಣಿಯ ಮೇಲೆ ಶಂಕರರಿಗೆ ಅನುಕಂಪ ಮೂಡಿತು ಹಾಗಾಗಿ ಅವರು ಸಂಪತ್ತಿನ ಅಧಿದೇವತೆಯಾದ ಲಕ್ಷ್ಮಿಯನ್ನು ಕುರಿತು ಸ್ತೋತ್ರ ರಚಿಸಿ ಸ್ತುತಿಸಿದರು. ಶಂಕರರ ಪ್ರಾರ್ಥನೆಗೆ ಒಲಿದ ಲಕ್ಷ್ಮೀ ಬಂಗಾರದ ನೆಲ್ಲಿ ಕಾಯಿಗಳನ್ನೇ ಸುರಿಸಿದಳು. ಈ ಸುವರ್ಣಾವೃಷ್ಟಿಯಿಂದ ಆ ಮಹಿಳೆಯ ಬಡತನ ನಿರ್ಮೂಲವಾಯಿತು. 'ದೇಯಂ ದೀನ ಜನಾಯ ಚ ವಿತ್ತಮ್' ಎಂದು ಸಾರಿದ ಶಂಕರರು ಮಾಡಿದ ಬಡತನ ನಿರ್ಮೂಲನ. ಇದು ಆಚಾರ್ಯ ಶಂಕರರ ಪರೋಪಕಾರದ ಮೊದಲ ಸಮಾಜಸೇವೆ. 'ಕನಕಧಾರಾ ಸ್ತೋತ್ರ'ವೆಂದೇ ಪ್ರಸಿದ್ಧಿ ಪಡೆದ ಈ ಲಕ್ಷ್ಮೀಸ್ತೋತ್ರ ಅವರ ಮೊದಲ ಕವಿತೆಯೂ ಹೌದು.

ಬ್ರಹ್ಮಚಾರಿ ಶಂಕರರು ಎಂಟು ವರ್ಷ ತುಂಬುವುದರೊಳಗೆ ವೇದಾಧ್ಯಯನ ಮುಗಿಸಿ, ಹನ್ನೆರಡು ವರ್ಷದ ಹೊತ್ತಿಗೆ ಶಾಸ್ತ್ರಗಳನ್ನೆಲ್ಲ ಅರಗಿಸಿಕೊಂಡರು (ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್.)

## ಸಂನ್ಯಾಸ ಸ್ವೀಕಾರ



– ಅಧ್ಯಯನ ಮುಗಿಸಿದ ಶಂಕರರು ಗುರುಕುಲದ ಮನೆಗೆ ಮರಳಿದರು. ಅವರ ಮನಸ್ಸಿನಲ್ಲಿ ಆಗ ವೈರಾಗ್ಯ ಹಾಗೂ ಸಂನ್ಯಾಸದ ಗುಂಗು! ತುಟಿಯ ತುದಿಯಲ್ಲಿ ಆತ್ಮಜ್ಞಾನದ ಪಿಪಾಸೆ! ಹಾಗಾಗಿ ಸಂನ್ಯಾಸ ಸ್ವೀಕರಿಸುವ ದೃಢ ಸಂಕಲ್ಪ ಮಾಡಿದರು. ತನ್ನ ಏಕಮಾತ್ರ ಪುತ್ರನಿಗೆ ಮದುವೆ ಮಾಡಿ ಕುಲದೀಪಕನನ್ನು ಕಾಣುವ ಕನಸಿನಲ್ಲಿದ್ದ ತಾಯಿಗೆ ಇದರಿಂದ ವಜ್ರಾಘಾತ! ಒಮ್ಮೆ ಶಂಕರರು ಪೂರ್ಣಾನದಿಯಲ್ಲಿ ಮೀಯುತ್ತಿದ್ದಾಗ ಒಂದು ಮೊಸಳೆ ಅವರ ಕಾಲು ಹಿಡಿಯಿತು. ಇನ್ನು ತಾನು ಬದುಕುವುದಿಲ್ಲವೆಂದೂ, ಸಂನ್ಯಾಸಕ್ಕೆ ಸಮ್ಮತಿಸಿದರೆ ನೆಮ್ಮದಿಯಿಂದ ಪ್ರಾಣ ಬಿಡುವುದಾಗಿಯೂ ತಾಯಿಯಲ್ಲಿ ಅಂಗಲಾಚಿದರು. ಕೊನೆಗೆ ವಿಧಿಯಿಲ್ಲದೆ ತಾಯಿ 'ಅಸ್ತು' ಎನ್ನ ಬೇಕಾಯಿತು. ಅದೇನು ಕಾರಣವೋ, ಮೊಸಳೆಯೂ ಓಡಿ ಹೋಯಿತು. ಅಂತೂ ಶಂಕರರ ಇಷ್ಟಾರ್ಥ ನೆರವೇರಿತು.

ವೈರಾಗ್ಯದ ಮರಳುಗಾಡಿನಲ್ಲಿ ಒಂಟಿಯಾಗಿ ಶಂಕರರು ಹೊರಟರು. ಓಂಕಾರನಾಥ ಕ್ಷೇತ್ರದ ನರ್ಮದಾನದಿಯ ತೀರದಲ್ಲಿ ಗೋವಿಂದ ಭಗವತ್ಪಾದರಿಂದ ಸಂನ್ಯಾಸ ದೀಕ್ಷೆ ಸ್ವೀಕರಿಸಿದರು. ಕೆಲವೇ ದಿನಗಳಲ್ಲಿ ಅವರು ಆಧ್ಯಾತ್ಮದ ಶೃಂಗವನ್ನೇರಿದರು.

## ಶಂಕರದಿಗ್ವಿಜಯ

ಪುಣ್ಯ ಭೂಮಿ ಭಾರತದ ಅನೇಕ ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸಿದ ಭಗವತ್ಪಾದ ಶಂಕರರು ಕಾಶೀಕ್ಷೇತ್ರವನ್ನು ತಲುಪಿದರು. 'ಜ್ಞಾನ–ವೈರಾಗ್ಯ ಸಿಧ್ಯರ್ಥಂ ಭಿಕ್ಷಾ ದೇಹಿ ಚ ಪಾರ್ವತೀ' ಎಂದು ಕಾಶೀ ಪುರಾಧೀಶ್ವರಿಯಾದ ಅನ್ನಪೂರ್ಣೆಯ ಮುಂದೆ ಜ್ಞಾನ–ವೈರಾಗ್ಯಗಳ ಭಿಕ್ಷೆ ಬೇಡಿದರು. ಬಾಲ ಸಂನ್ಯಾಸಿಯ ಬ್ರಹ್ಮತೇಜಸ್ಸು ಬಾಯಿಯಿಂದ ಹೊರ ಹೊಮ್ಮುತ್ತಿದ್ದ ಭಕ್ತಿರಸ–ಪ್ರಧಾನವಾದ ಗೀತೆಗಳು ಪ್ರಬೋಧ ಪೂರ್ಣವೇದಾಂತ ಪ್ರವಚನ–ಇವೆಲ್ಲ ಅಲ್ಲಿಯ ಎಲ್ಲರನ್ನು ಬೆರಗುಗೊಳಿಸಿದುವು. ಅವರಿಗೆ ಅನೇಕ ಮಂದಿ ಶಿಷ್ಯರಾದರು. ಶಂಕರರು ತಮ್ಮ ಭಾಷ್ಯರಚನೆಯನ್ನು ಆರಂಭಿಸಿದ್ದು ಕಾಶೀ ಕ್ಷೇತ್ರದಲ್ಲೇ.

ಅನಂತರ ಅವರು ದಿಗ್ವಿಜಯ ಯಾತ್ರೆ ಕೈಗೊಂಡು ಪೂರ್ವದ ಜಗನ್ನಾಥದಿಂದ ಪಶ್ಚಿಮದ ದ್ವಾರಕೆಯವರೆಗೂ, ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದ ಕಾಶ್ಮೀರದವರೆಗೂ ಸಂಚಾರಮಾಡಿ ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು. ಹೋದಲ್ಲೆಲ್ಲ ದೇವಸ್ಥಾನಗಳನ್ನು ಪುನರುಜ್ಜೀವನಗೊಳಿಸಿದರು. ಅನೇಕರನ್ನು ಧರ್ಮಮಾರ್ಗಕ್ಕೆ ತಂದರು. ದೇಶದ ನಾಲ್ಕು ದಿಕ್ಕುಗಳ ತುದಿಯಲ್ಲಿರುವ ಶೃಂಗೇರಿ, ಬದರಿ, ಪುರಿ ಮತ್ತು ದ್ವಾರಕೆಗಳಲ್ಲಿ ನಾಲ್ಕು ಧರ್ಮಪೀಠಗಳನ್ನು ಸ್ಥಾಪಿಸಿದರು. ತಮ್ಮ ನಾಲ್ವರು ಪ್ರಮುಖ ಶಿಷ್ಯರಾದ ಸುರೇಶ್ವರಾಚಾರ್ಯ, ತೋಟಕಾಚಾರ್ಯ, ಹಸ್ತಾಮಲಕಾಚಾರ್ಯ ಮತ್ತು ಪದ್ಮಪಾದಾಚಾರ್ಯರನ್ನು ಈ ಪೀಠಗಳ ಅಧಿಪತಿಗಳನ್ನಾಗಿ ನೇಮಿಸಿದರು.

ಶಂಕರರು ಇತರ ಮತಧರ್ಮಗಳ ಪಂಡಿತರನ್ನು ವಾದದಲ್ಲಿ ಜಯಿಸಿ, ದಕ್ಷಿಣದ ಬಾಗಿಲ ಮೂಲಕ ಸರ್ವಜ್ಞ ಪೀಠವನ್ನು ಏರಿದರು. ಕಾಶ್ಮೀರದಲ್ಲಿಯ ಸರ್ವಜ್ಞ ಪೀಠವನ್ನು ಏರುವುದೆಂದರೆ ಅದೊಂದು ಸಂಕೇತ. ಈ ಪುಣ್ಯಭೂಮಿ ಭಾರತದ ಆಧ್ಯಾತ್ಮದ ತುದಿಯನ್ನು ಮುಟ್ಟಿದರೆಂಬುದರ ಕುರುಹು. ವಿದ್ಯಾಧಿದೇವತೆ ಶಾರದೆಯ ಪೂರ್ಣ ಅನುಗ್ರಹ ಶಂಕರರಿಗೆ ದೊರಕಿತ್ತು ಎಂಬುದಕ್ಕೆ ನಿದರ್ಶನ. ಆಚಾರ್ಯರು ತಮ್ಮ ಕೊನೆಯ ದಿನಗಳನ್ನು ಉತ್ತರದ ಕೇದಾರದಲ್ಲಿ ಕಳೆದು, ಬ್ರಹ್ಮನಿರ್ವಾಣವನ್ನು ಪಡೆದರು.

## ತೋರಿದ ದಾರಿ

ಶ್ರೀ ಶಂಕರರು ಮನುಷ್ಯ ಜೀವನ ಹೇಗಿರಬೇಕು? ಎಂದು ತೋರಿಸಿಕೊಟ್ಟರು. ಜ್ಞಾನ, ಭಕ್ತಿ, ವೈರಾಗ್ಯ–ಮೊದಲಾದ ಸಾರ್ಥಕ ಗುಣಗಳಿಂದ ಜೀವನ ಕಂಗೊಳಿಸಬೇಕು ಎಂಬುದು ಅವರ ದೃಢವಾದ ನಿಲುವು. ಅವರು ಬೋಧಿಸಿದುದು ಅದ್ವೈತ ಮಾರ್ಗ. ಈ ಜಗತ್ತಿನಲ್ಲಿ ಎಲ್ಲವೂ ಒಂದೇ. ಎಲ್ಲವೂ ಬ್ರಹ್ಮ ಪ್ರಪಂಚದಲ್ಲಿ ಬದಲಾವಣೆಯಾಗುತ್ತಲೇ ಇರುತ್ತದೆ. ಈ ಬದಲಾವಣೆಗಳು ಮುಖ್ಯವಲ್ಲ; ಸತ್ಯವಲ್ಲ. ಎಲ್ಲ ವಸ್ತುಗಳು ಮತ್ತು ಕ್ರೀಯೆಗಳ ಹಿಂದೆ ಇರುವ ಸತ್ಯ ಬ್ರಹ್ಮ; ಬ್ರಹ್ಮ ಬೇರೆ, ಮನುಷ್ಯರು ಬೇರೆ ಅಲ್ಲ; ಮನುಷ್ಯರಲ್ಲಿ ಮೇಲು–ಕೀಳು ಎಂಬ ಭಾವನೆಯನ್ನು ಇಟ್ಟುಕೊಳ್ಳಬಾರದು. ಪರಮಾತ್ಮನನ್ನು ಎಲ್ಲರಲ್ಲಿಯೂ, ಎಲ್ಲೆಲ್ಲಿಯೂ ಕಾಣುವ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು. ಈ ದೃಷ್ಟಿಯನ್ನು ಪಡೆದವರಿಗೆ ಪ್ರಪಂಚವೆಲ್ಲ ತಮ್ಮ ದೇಶವೇ (ಸ್ವದೇಶೋ ಭುವನತ್ರಯಂ). ಪ್ರಪಂಚದ ಎಲ್ಲರೂ ತಮ್ಮ ಅಣ್ಣ–ತಮ್ಮ, ಅಕ್ಕ–ತಂಗಿಯರೇ.

ಶಂಕರರು ಜನರಿಗೆ ಸನಾತನಧರ್ಮ ಅರ್ಥವಾಗಲೆಂದು ಪ್ರಸ್ಥಾನತ್ರಯಗಳಿಗೆ (ಬ್ರಹ್ಮ ಸೂತ್ರ, ಉಪನಿಷತ್ತು ಮತ್ತು ಭಗವದ್ಗೀತೆ) ಭಾಷ್ಯವನ್ನು ಬರೆದರು. ಜೊತೆಗೆ ಜನಸಾಮಾನ್ಯರಿಗೆ ಭಕ್ತಿಯ ಪೋಷಣೆಗೆ ಅನುಕೂಲವಾಗುವಂತಹ ಅನೇಕ ಸ್ತೋತ್ರಗಳನ್ನು ರಚಿಸಿದರು. ಪ್ರಕರಣ ಗ್ರಂಥಗಳನ್ನು ಬರೆದರು. ಪ್ರಚಲಿತವಾಗಿರುವ ಪಂಚಾಯತನ ಪೂಜಾ ವ್ಯವಸ್ಥೆಯನ್ನು ಪರಿಷ್ಕರಿಸಿ ಕೊಟ್ಟವರು ಶ್ರೀ ಶಂಕರರು. ಸನ್ಯಾಸಿಗಳನ್ನು ಸಂಘಟಿಸಿ 'ದಶನಾಮೀ ಸಂಪ್ರದಾಯವನ್ನು ತಂದವರೂ ಅವರೇ. ಸೌರ, ಶಾಕ್ತ, ಗಾಣಪತ್ಯ ಮುಂತಾದ ತಾಂತ್ರಿಕ ಮತಗಳಲ್ಲಿದ್ದ ದುಷ್ಟ ಆಚಾರಗಳನ್ನು ತೆಗೆದು ಹಾಕಿ, ಅವುಗಳನ್ನು ಪರಿಶುದ್ಧಗೊಳಿಸಿದ್ದರಿಂದ ಅವರು ಷಣ್ಮತಸ್ಥಾಪನಾಚಾರ್ಯರಾದರು. ಈ ದೇಶದ ಸಾಂಸ್ಕೃತಿಕ ಏಕತೆಗಾಗಿ 'ಕುಂಭಮೇಳ' ಆರಂಭಿಸಿದವರೂ ಅವರೇ. ತಮ್ಮ ವಿಚಾರಧಾರೆಯಿಂದ ಮಾನವ ವಿಚಾರಧಾರೆಯ ದಿಕ್ಕನ್ನೇ ಬದಲಿಸಿದ ಶ್ರೇಷ್ಠ ದಾರ್ಶನಿಕರ ಪರಂಪರೆಯಲ್ಲಿ ಶಂಕರರು ಅಗ್ರಗಣ್ಯರೆನಿಸಿದ್ದಾರೆ. ಹಾಗಾಗಿ ನಮ್ಮ ದೇಶದ ಶ್ರೀ ರಾಮಕೃಷ್ಣ ಪರಮಹಂಸ ವಿವೇಕಾನಂದ, ಅರವಿಂದ, ರಮಣಮಹರ್ಷಿ, ಶಿವಾನಂದ, ಚಿನ್ಮಯಾನಂದ ಮೊದಲಾದವರೂ ಮಾತ್ರವಲ್ಲ ವಿದೇಶಗಳ ವಿದ್ವಾಂಸರೂ ಶಂಕರರಿಂದ ಆಕರ್ಷಿತರಾಗಿದ್ದಾರೆ.

ಎಲ್ಲ ಮಾನವರಲ್ಲಿಯೂ ದೇವತ್ವವನ್ನು ತೋರಿಸಿಕೊಟ್ಟು ಮಾನವ ಕೋಟಿಯ ಉದ್ಧಾರದ ಹೆದ್ದಾರಿಯನ್ನು, ಆಚಾರ್ಯ ಶಂಕರರು ಕನ್ಯಾ ಕುಮಾರಿಯಿಂದ ಹಿಮಾಲಯದವರೆಗೆ "ನಮ್ಮ ದೇಶ ಅಖಂಡವಾದುದು" ಎಂದು ಸಾರಿದ ರಾಷ್ಟ್ರೀಯ ಏಕತೆಯ ಹರಿಕಾರರು ಅವರು. ಮಹಾತ್ಮರಾದ ಅವರ ದಿವ್ಯ ಜೀವನ ನಮ್ಮ ಬಾಳಿಗೆ ಬೆಳಕಾಗಲಿ; ಅವರು ಕಟ್ಟಿದ ಅಖಂಡ ಭಾರತದ ಕಲ್ಪನೆ ನಮ್ಮದಾಗಲಿ, ಅವರು ತೋರಿದ ಜೀವನ ತತ್ವ ನಮ್ಮನ್ನು ತುಂಬಲಿ ಎಂದು ಹಾರೈಕೆ.

Krishna Rao
Ph : 2520652
Mob. : 9902029048
KISHAN
Studio & Video
Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

ಪ್ರೊ : ಸುಧಾಕರ್ ರಾವ್ ಬೆಳ್ಳೆ
ಶ್ರೀಮಾತಾ ಇಲೆಕ್ಟ್ರಾನಿಕ್ಸ್
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ
ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

## THE REGISTRATION OF NEWS PAPERS (CENTRAL) RULES 1956

### SCHEDULE
### FORM OF DECLARATION
### Form 1 (See Rule-3)

I, Aravinda Kumar, Manipal declare that I am the publisher of the Newspaper entitled ìShri Sharada" to be published at Udupi on behalf of Shree Sthanika Dravida Brahmana Sangha,Æ and that particulars in respect of the said News Paper given here under are true to the best of my knowledge and belief .

| | | | |
|---|---|---|---|
| 1. | Title of the News Paper | : | **SHRI SHARADA** |
| 2. | Language in which it is to be published | : | **KANNADA** |
| 3. | Periodicity of this publication | : | a) Monthly<br>b) 15th of every month |
| 4. | Registration No | : | Registered Under No.KA/SK/UDP/ 1260/2012-2014 Dated from 01-01-2012 to 31-12-2014.<br>Licenced to Post without Prepayment WPP No. SK/WPP/UDP/81/2012-14 |
| 5. | Retail selling price of the Newspaper per copy | : | Rs 2-50 |
| 6. | Publisherís Name | : | **Aravinda Kumar, Manipal**<br>Secretary, Sri Sthanika Dravida Brahmana Sangha, Æ<br>Kunjibettu, Udupi-576102. |
| 7. | Place of Publication | : | **Sri Sharada Mantapa, Kunjibettu, Udupi - 576102.** |
| 8. | Editorís Name | : | **Sri Krishnakumar Rao, Mattu** |
| | Nationality | : | Indian |
| | Address | : | Sri Sthanika Dravida Brahmana Sangha, Æ Kunjibettu, Udupi-576102. |
| 9. | Printerís Name | : | **Vishnu Moorthy Tantry** |
| | Nationality | : | Indian |
| | Address | | Agrahara Offsets, Behind Karnataka Bank, Car Street, Udupi - 576101 |
| 10. | Name of the printing press where the Newspaper is actually printed and the true and precise description of the premises on which the press is installed | : | Agrahara Offsets, Behind Karnataka Bank, Car Street Udupi. |
| 11. | Ownerís Name | : | **Sri Sthanika Dravida Brahmana Sangha Æ, Kunjibettu, Udupi-576102** |
| | a) Individual or Firm | : | Firm |
| | b) Whether the owner owns any Newspaper | : | No |
| 12. | Please state whether the declaration is in respect of | : | a) A Monthly Newspaper |

Date : 11-05-2014  Sd/-
Place : UDUPI  The Secretary
For Sri Sthanika Dravida Brahmana Sangha (R), Udupi

## ಷಷ್ಟ್ಯಬ್ಧಶಾಂತಿ ಕಾರ್ಯಕ್ರಮ

ಬೆಳ್ವೆ ಅಬ್ಲಿಕಟ್ಟೆ ಶ್ರೀ ಗೋಪಾಲಕೃಷ್ಣ ಹೆಬ್ಬಾರರು ತಮ್ಮ ಷಷ್ಟ್ಯಬ್ಧಶಾಂತಿ ಕಾರ್ಯಕ್ರಮವನ್ನು ಪತ್ನಿ, ಮಕ್ಕಳು, ಬಂಧು ಬಾಂಧವರೊಡಗೂಡಿ ಅಬ್ಲಿಕಟ್ಟೆಯ ತಮ್ಮ ಸ್ವಗೃಹದಲ್ಲಿ ನೆರವೇರಿಸಿದರು.

### ವೃಷಭ ಮಾಸದ ವಿಶೇಷ ದಿನಗಳು

| | |
|---|---|
| 14-05-2014 | ವೃಷಭ ಸಂಕ್ರಮಣ, ಪೂರ್ಣಿಮಾ |
| 17-05-2014 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-9.33ಕ್ಕೆ |
| 24-05-2014 | ಸರ್ವೇಕಾದಶೀ |
| 25-05-2014 | ರೋಹಿಣೀ ನಕ್ಷತ್ರಾರಂಭ |
| 26-05-2014 | ಪ್ರದೋಷಃ |
| 28-05-2014 | ಅಮಾವಾಸ್ಯಾ |
| 08-06-2014 | ಮೃಗಶಿರಾ ನಕ್ಷತ್ರಾರಂಭ |
| 09-06-2014 | ಸರ್ವೈಕಾದಶೀ |
| 10-06-2014 | ಪ್ರದೋಷಃ |
| 13-06-2014 | ಪೂರ್ಣಿಮಾ |
| 15-06-2014 | ಮಿಥುನ ಸಂಕ್ರಮಣ |

### ಸಹಸ್ರಚಂದ್ರದರ್ಶನ ಶಾಂತಿ

ಮತ್ಯಾಡಿಯಲ್ಲಿ ವಾಸ್ತವ್ಯದಲ್ಲಿರುವ ಸಕ್ಕಟ್ಟು ಶ್ರೀನಿವಾಸಯ್ಯನವರು ತಮ್ಮ ಸಹಸ್ರಚಂದ್ರದರ್ಶನ ಶಾಂತಿ ಕಾರ್ಯಕ್ರಮವನ್ನು ದಿನಾಂಕ 27-04-2014ರಂದು ಮತ್ಯಾಡಿಯ ಸ್ವಗೃಹ ಇಂದಿರಾನಿಲಯದಲ್ಲಿ ಪತ್ನಿ ಮಕ್ಕಳು, ಬಂಧು ಬಾಂಧವರೊಡಗೂಡಿ ನೆರವೇರಿಸಿದರು.

### ಶ್ರೀ ಚಂಡಿಕಾಯಾಗ

ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಇದರ ಅಧ್ಯಕ್ಷರಾದ ಶ್ರೀ ಯು. ಪ್ರಫುಲ್ಲಚಂದ್ರ ರಾವ್ ಹಾಗೂ ಶ್ರೀಮತಿ ಪೂರ್ಣಿಮಾ ದಂಪತಿಗಳ ವೈವಾಹಿಕ ಬೆಳ್ಳಿ ಹಬ್ಬದ ಪ್ರಯುಕ್ತ ದಿನಾಂಕ 08-05-2014ರಂದು ಶ್ರೀಶಾರದಾ ಮಂಟಪದಲ್ಲಿ ಶ್ರೀ ಚಂಡಿಕಾ ಯಾಗವು ಬಂಧುಬಾಂಧವರೊಳಗೊಂಡು ಸಂಪನ್ನಗೊಂಡಿತು.

## 10ನೇ ತರಗತಿ ಹಾಗೂ ಪಿಯುಸಿಯಲ್ಲಿ ಉತ್ಕೃಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸೂಚನೆ :

2013-14ನೇ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ತಮ್ಮ ವಿಳಾಸ, ಅಂಕಪಟ್ಟಿಯ ಪ್ರತಿ, ತಂದೆ ತಾಯಿಯ ಹೆಸರು, ಕಲಿತ ಶಾಲೆಯ ಹೆಸರು, ದೂರವಾಣಿ ಸಂಖ್ಯೆ ಮೊದಲಾದ ವಿವರಗಳನ್ನು ತಮ್ಮ ಭಾವಚಿತ್ರದೊಂದಿಗೆ ಉಡುಪಿಯ ಶ್ರೀಶಾರದಾ ಮಂಟಪಕ್ಕೆ ಕಳುಹಿಸಿದಲ್ಲಿ ಶ್ರೀಶಾರದಾ ಪತ್ರಿಕೆಯಲ್ಲಿ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಅನುಕೂಲವಾಗುತ್ತದೆ. ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

## ನಿಧನ

### ಬಿ.ಮನೋರಮಾ ರಾವ್

ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿದ್ದ ಖ್ಯಾತ ಹಿರಿಯ ನ್ಯಾಯವಾದಿ ಶ್ರೀ ಭವಾನಿಶಂಕರರಾಯರ ಧರ್ಮಪತ್ನಿ ಬಿ.ಮನೋರಮಾ ರಾವ್ (74ವರ್ಷ) ದಿನಾಂಕ 27-02-2014ರಂದು ಸ್ವಗೃಹದಲ್ಲಿ ನಿಧನರಾದರು. ಬೆಂಗಳೂರಿನ ನಮ್ಮ ಸಮಾಜದ ಸಂಘಟನೆಯಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡಿದ್ದ ಮೃತರು ಪುತ್ರ-ಖ್ಯಾತ ನ್ಯಾಯವಾದಿ ಶ್ರಿ ಶರತ್, ಪುತ್ರಿ ಡಾ। ರೇಣುಕಾ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಶ್ರೀ ನಂದಾವರ ಶಿವಶಂಕರ ರಾವ್

ಕೆನರಾ ಬ್ಯಾಂಕ್‌ನ ನಿವೃತ್ತ ಅಧಿಕಾರಿ ಹಾಗೂ ಶಿವಮೊಗ್ಗ ನಿವಾಸಿ ಶ್ರೀ ನಂದಾವರ ಶಿವಶಂಕರ ರಾವ್ (61) ಇವರು ದಿನಾಂಕ 15-04-2014 ರಂದು ಹೃದಯಾಘಾತದಿಂದ ನಿಧನರಾದರು. ಶ್ರೀಯುತರು ಈ ಹಿಂದೆ ಮುಲ್ಕಿಯ ನಿವಾಸಿಯಾಗಿದ್ದು ಪತ್ನಿ, ಪುತ್ರ, ಪುತ್ರಿ ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಶುಂಠಿಪಾಡಿ ಸುರೇಶ್ ಕುಮಾರ್

ಮಂಗಳೂರಿನಲ್ಲಿ ವಾಸ್ತವ್ಯದಲ್ಲಿದ್ದ ಶುಂಠಿಪಾಡಿ ಸುರೇಶ್ ಕುಮಾರ್ (61 ವರ್ಷ) ಅವರು ದಿನಾಂಕ 23-04-2014ರಂದು ನಿಧನರಾದರು. ಮೃತರು ತಮ್ಮ ಸಹೋದರ ಶುಂಠಿಪಾಡಿ ಮೋಹನರಾವ್ ಸಹಿತ, ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

## ಕವನಗಳು

### ‘ಕರುನಾಡ ಚೆಲುವೆ’

ಓ ಕರುನಾಡ ಹೆಮ್ಮೆಯ ಒಲವೇ
ನೀನಿಲ್ಲದೆ ನಾ ಹೇಗೆ ಬಾಳಲಿ?
ಸೋಲಲ್ಲಿ ಗೆಲುವಾಗಿ ನೀನಿದ್ದು,
ನೀ ಗೆಲ್ಲಿಸಿದೆ ನನ್ನ ಬದುಕನ್ನು ॥೧॥
ಕ್ರಾಂತಿಯ ಬೀಜವನ್ನು ನೀ ಬಿತ್ತಿ,
ಪ್ರೀತಿಯ ಬೀಜವನ್ನು ನೀ ಬಿತ್ತಿ,
ಪ್ರೀತಿಯ ಮರವನ್ನು ನೀ ಬೆಳೆಸಿದೆ
ಓ ಕರುನಾಡ ಚೆಲುವೆ
ನಿನ್ನ ರೂಪವನ್ನು ನಾ ಕಾಣೆ ॥೨॥
ಜಗಕ್ಕೆ ಬೆಳಕನ್ನು ನೀಡುವ ಸೂರ್ಯನೋ ನೀ?
ಕಲ್ಲಲ್ಲಿ ಹೊಳೆಯುವ ಮೂರ್ತಿಯೋ ನೀ?
ಸೂರ್ಯನಂಥ ಹೊಳಪು, ಚಂದ್ರನಂಥ ಪ್ರಕಾಶ
ಕವಿಯ ಮನಕ್ಕೂ ನಿಲುಕದ ಸೌಂದರ್ಯ ನಿನ್ನದು ॥೩॥
ನೀ ನನ್ನ ಬದುಕಲ್ಲಿ ಬಂದು
ಗೆಲುವಿನ ದಡ ಸೇರಿಸಿದೆ.
ಪ್ರೀತಿಯ ಗೆಳತಿಯಾಗಿ ಬಂದು
ಗೆಳತನದ ಸವಿಯನ್ನು ಉಣಿಸಿದೆ ॥೪॥
ಮಲಗಿದ್ದ ಮನಸ್ಸನ್ನು ನೀ ಎಬ್ಬಿಸಿ
ಪ್ರೀತಿಯ ಅಲೆಯನ್ನು ನೀ ತುಂಬಿದೆ.

–ಕ.ಸು.ಶ್ರೀ

### ‘ಸಂಧ್ಯಾ ರಾಗ’

ನಾಲ್ಕು ದಿನದ ಬಾಳನಲ್ಲಿ
ಕಳೆದಿದ್ದಾಯ್ತು ಮುಕ್ಕಾಲುಭಾಗ
ಸಾಧಿಸಲಿಲ್ಲ, ಗಳಿಸಲಿಲ್ಲ
ಕೊನೆತಲುಪಿದೆ ಸಂಧ್ಯಾರಾಗ.
ಮುಕ್ಕಾಲು ಭಾಗದ ಬಾಳನಲ್ಲಿ
ಬದುಕ ತಿಳಿಯುವುದೆ ಆಯ್ತು
ಉಳಿದ ಕಾಲದಲ್ಲಿ ಬದುಕುನು
ಹೇಗೆ ರೂಪಿಸಲು ತಿಳಿದಾಯ್ತು.
ಅನುಭವ ಸಿಕ್ಕಾಗ ವಯಸ್ಸು ಗತಿಸಿ
ಬಳಸಿಕೊಳ್ಳಲು ಕಾಲಾವಕಾಶವಿಲ್ಲ
ವಯಸ್ಸಿದ್ದಾಗ ಅನುಭವ-ಬುದ್ಧಿ
ನನ್ನ ವಶದಲ್ಲಿ ಇರಲಿಲ್ಲ.
ವ್ಯರ್ಥ ಬದುಕಿನ ಬಗ್ಗೆ
ದುಃಖವೇ ನನ್ನ ಆಸ್ತಿ
ಹೇಳಿಕೊಳ್ಳಲು ಕೇಳುವವರಿಲ್ಲ
ಯಾರೂ ಇಲ್ಲದ ದೋಸ್ತಿ.
ಬದುಕು ಹೀಗಿರ ಬಹುದೇನೋ
ಬಾದಾಮಿ ಸಿಕ್ಕಾಗ ಹಲ್ಲಿಲ್ಲ
ಹಲ್ಲಿದ್ದಾಗ ಸಿಗಲೇ ಇಲ್ಲ
ಬಾದಾಮಿ ರುಚಿ ಸುಳ್ಳಲ್ಲ.

–ಮಾರ್ಪಳ್ಳಿ ಆರ್ ಮಂಜುನಾಥ್.

## ಮಾಂಗಲ್ಯಂ ತಂತುನಾನೇನ ....

ಮೂಡುಅಲೆವೂರು ದಿ। ಮೋಹನರಾವ್ ಮತ್ತು ಶ್ರೀಮತಿ ಸರಸ್ವತಿಯವರ ಪುತ್ರ **ಲವರಾವ್** ಹಾಗೂ ಸುಳ್ಯದ ದಿ। ಕೆ.ವಿ.ರಾಜು ಮತ್ತು ಶ್ರೀಮತಿ ಶಾಂಭವಿಯವರ ಪುತ್ರಿ **ರಮ್ಯಾ** ಇವರ ವಿವಾಹವು ದಿನಾಂಕ 02-05-2014ರಂದು ಪುರಭವನ, ಸುಳ್ಯದಲ್ಲಿ ನೆರವೇರಿತು.

*** ***

ನಿಟ್ಟೆ ಕೆಮ್ಮಣ್ಣು ಶ್ರೀಮತಿ ಲೀಲಾವತಿ(ಸುಮಾ) ಮತ್ತು ಶ್ರೀ ಕೆ ಸುರೇಶ್‌ರಾಯರ ಪುತ್ರ **ಸುಮಿತ್** ಹಾಗೂ ನಂದಿಕೂರು ಶ್ರೀಮತಿ ವನಮಾಲ ಮತ್ತು ಶ್ರೀ ರಾಜಕುಮಾರ್ ರಾವ್ ಪುತ್ರಿ **ಅಪೂರ್ವ** ಇವರ ವಿವಾಹವು ದಿನಾಂಕ 12-05-2014ರಂದು ನಂದಿಕೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಶ್ರೀ ರಾಜರಾಜೇಶ್ವರೀ ಸಭಾಂಗಣದಲ್ಲಿ ನೆರವೇರಿತು.

*** ***

ಬೆಂಗಳೂರು ಹೆಬ್ಬಾಳದ ಶ್ರೀಮತಿ ಗೀತಾ ಮತ್ತು ಶ್ರೀ ಅಶೋಕರಾವ್‌ರವರ ಪುತ್ರ **ವಿನಾಯಕ ರಾವ್** ಹಾಗೂ ಬೆಳ್ಳೆ ಶ್ರೀಮತಿ ವಿನೋದಾ ಮತ್ತು ಶ್ರೀ ಸುಧಾಕರರಾವ್ ಪುತ್ರಿ **ಸುಮಾ** ಇವರ ವಿವಾಹವು ದಿನಾಂಕ 01-05-2014ರಂದು ಕುಂದಾಪುರ ತಾಲೂಕು ಕಮಲಶಿಲೆಯ ಶ್ರೀ ಬ್ರಾಹ್ಮಿ ದುರ್ಗಾ ಪರಮೇಶ್ವರೀ ದೇವಸ್ಥಾನದ ಬ್ರಾಹ್ಮಿ ಸಭಾಭವನದಲ್ಲಿ ನೆರವೇರಿತು.

*** ***

ಕಾಪು ಶ್ರೀ ಶ್ರೀನಿವಾಸರಾವ್ ಮತ್ತು ಶ್ರೀಮತಿ ಪ್ರಸನ್ನ ಇವರ ಪುತ್ರ **ಸಂಪತ್** ಹಾಗೂ ಶ್ರೀಮತಿ ಮತ್ತು ದಿ। ಮಂಜುನಾಥ ಕುಲಕರ್ಣಿಯವರ ಪುತ್ರಿ **ಶಾರದಾ** ಇವರ ವಿವಾಹವು ದಿನಾಂಕ 12-05-2014ರಂದು ಕಾಪು ಶ್ರೀ ವೀರಭದ್ರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

*** ***

ಪ್ರಸ್ತುತ ಶಿವಮೊಗ್ಗದಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಲಲಿತ ಮತ್ತು ದಿ। ನಂದಾವರ ಶಿವಶಂಕರ ರಾವ್‌ರವರ ಪುತ್ರ **ಸುಹಾಸ** ಹಾಗೂ ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಶಿವಮೊಗ್ಗ ಶ್ರೀನಿವಾಸ ಮೂರ್ತಿ ಇವರ ಪುತ್ರಿ **ನಂದಿತಾ** ಇವರ ವಿವಾಹವು ತಾ.8-5-2014ರಂದು ಉಡುಪಿ ಶ್ರೀ ರಾಘವೇಂದ್ರ ಮಠದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

*** ***

ಶ್ರೀಮತಿ ಮಲ್ಲಿಕಾ ಮತ್ತು ಶ್ರೀ ಜಗದೀಶ ರಾವ್ ಇವರ ಪುತ್ರ **ಕಿಶೋರ್‌ಕುಮಾರ್** ಹಾಗೂ ಶ್ರೀಮತಿ ಯಶೋದಾ ಮತ್ತು ಶ್ರೀ ಶ್ರೀನಿವಾಸರಾವ್‌ರವರ ಪುತ್ರಿ **ಸವಿತಾ** ಇವರ ವಿವಾಹವು ತಾ.11-5-2014ರಂದು ನಂದಿಕೂರಿನ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಶ್ರೀ ರಾಜರಾಜೇಶ್ವರಿ ಸಭಾಂಗಣದಲ್ಲಿ ನೆರವೇರಿತು.

*** ***

ಶ್ರೀಮತಿ ಲೀಲಾವತಿ ಮತ್ತು ಶ್ರೀ ಅಚ್ಚುತ ರಾಯರ ಪುತ್ರ **ಅಜಿತ್** ಹಾಗೂ ಶ್ರೀಮತಿ ಭಾರತಿ ಮತ್ತು ಶ್ರೀ ಬೋಳ ಜಯಂತರಾಯರ ಪುತ್ರಿ **ಅನ್ನಪೂರ್ಣ** ಇವರ ವಿವಾಹವು ತಾ.12-5-2014ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಶಾರದ್ವತ ಯಜ್ಞಾಂಗಣದಲ್ಲಿ ನೆರವೇರಿತು.

## ಬ್ರಹ್ಮೋಪದೇಶ

### ಚಿ। ಪ್ರಮಿತ್ ಪ್ರಸಾದ್

ಶ್ರೀಮತಿ ನಮಿತಾ ಮತ್ತು ಶ್ರೀ ಎಂ. ಶಿವಪ್ರಸಾದ್ ಬೆಳ್ಳಗುಂಡಿ ಮನೆ ಮುದ್ರಾಡಿ ಇವರ ಪುತ್ರ **ಪ್ರಮಿತ್ ಪ್ರಸಾದ್**ನ ಬ್ರಹ್ಮೋಪದೇಶವು ದಿನಾಂಕ 05-05-2014ರಂದು ಉಡುಪಿ ಕುಂಜಿಬೆಟ್ಟಿನ ಜ್ಞಾನ ಮಂದಿರದಲ್ಲಿ ನೆರವೇರಿತು.

*** ***

### ಚಿ। ವಿಘ್ನೇಶ್ ಕುಮಾರ್

ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ಜೊಕ್ಕಾಡಿ ದಿವಾಕರ ರಾವ್ ಇವರ ಪುತ್ರ **ವಿಘ್ನೇಶ್ ಕುಮಾರ್**ನ ಬ್ರಹ್ಮೋಪದೇಶವು ದಿನಾಂಕ 01-05-2014ರಂದು ಉಡುಪಿ ಕಿನ್ನಿಮುಲ್ಕಿಯ ಶ್ರೀ ವೀರಭದ್ರ ಕಲಾಭವನದಲ್ಲಿ ನೆರವೇರಿತು.

*** ***

### ಚಿ। ಮಾನುಷ

ಮಹಾರಾಷ್ಟ್ರದ ಪುಷ್ಯಗಾಂವ್‌ನಲ್ಲಿ ವಾಸ್ತವ್ಯದಲ್ಲಿರುವ ಒಳಕಾಡು ಶ್ರೀಮತಿ ಶ್ಯಾಮಲಾ ಮತ್ತು ಶ್ರೀ ಸತೀಶ್‌ರಾವ್ ಇವರ ಪುತ್ರ **ಮಾನುಷ**ನ ಬ್ರಹ್ಮೋಪದೇಶವು ದಿನಾಂಕ 04-05-2014ರಂದು ಉಡುಪಿ ಕುಂಜಿಬೆಟ್ಟಿನ ಶಾರದಾ ಮಂಟಪದಲ್ಲಿ ನೆರವೇರಿತು.

*** ***

### ಚಿ। ಕಿಶನ್ ಕುಮಾರ್

ಕಾರ್ಕಳ ತಾಲೂಕು ಬಜಗೋಳಿ ನೂರಾಲು ಬೆಟ್ಟಿನ ಪುನರಮನೆ ಶ್ರೀಮತಿ ಅರುಣಾ ಮತ್ತು ಶ್ರೀ ಮುರಳೀಧರ ಭಟ್ ಇವರ ಪುತ್ರ **ಕಿಶನ್ ಕುಮಾರ್**ನ ಬ್ರಹ್ಮೋಪದೇಶವು ದಿನಾಂಕ 04-05-2014ರಂದು ಉಡುಪಿ ಕುಂಜಿಬೆಟ್ಟಿನ ಶಾರದಾ ಮಂಟಪದಲ್ಲಿ ನೆರವೇರಿತು.

*** ***

### ಚಿ। ಚಿನ್ಮಯ

ಶ್ರೀ ರಾಮಮೂರ್ತಿ ರಾವ್ ಪೆರ್ಡೂರು ಮತ್ತು ಶ್ರೀಮತಿ ಅನುರಾಧ ಇವರ ಪುತ್ರ **ಚಿನ್ಮಯ**ನ ಬ್ರಹ್ಮೋಪದೇಶವು ದಿನಾಂಕ 18-04-2014ರಂದು ಪೆರ್ಡೂರಿನ ಸುಬ್ರಾಯ ಕಲ್ಯಾಣ ಮಂಟಪದಲ್ಲಿ ನೆರವೇರಿತು.

*** ***

### ಚಿ। ಕೌಸ್ತುಭ

ಶ್ರೀ ಕೃಷ್ಣರಾಜ ವಿ. ಉಪಾಧ್ಯಾಯ ಮತ್ತು ಶ್ರೀಮತಿ ಶ್ರೀಕಲಾ ಇವರ ಪುತ್ರ **ಕೌಸ್ತುಭ**ನ ಬ್ರಹ್ಮೋಪದೇಶವು ದಿನಾಂಕ 18-04-2014ರಂದು ಸುಬ್ರಹ್ಮಣ್ಯದ ನೂಜಿಲದಲ್ಲಿರುವ ಸ್ವಗೃಹ ಶ್ರೀನಿಧಿ ಯಲ್ಲಿ ನೆರವೇರಿತು.

*** ***

### ಚಿ। ಗೌತಮ್

ಬೆಳ್ಮಣ್ಣು ಬೈಲುಮನೆ ಶ್ರೀಮತಿ ಅನಿತಾ ಮತ್ತು ಶ್ರೀ ರವಿರಾಜ್ ರಾವ್ ಇವರ ಪುತ್ರ **ಗೌತಮ್**ನ ಬ್ರಹ್ಮೋಪದೇಶವು ದಿನಾಂಕ 02-05-2014ರಂದು ಉಡುಪಿ ಕುಂಜಿಬೆಟ್ಟಿನ ಶಾರದಾ ಮಂಟಪದಲ್ಲಿ ನೆರವೇರಿತು.

*** ***

### ಚಿ। ಪ್ರಥಮ್

ಶ್ರೀಮತಿ ರೇಶ್ಮಾ ಮತ್ತು ಶ್ರೀ ಇನ್ನಾ ಪ್ರದೀಪ್ ರಾವ್ ಇವರ ಪುತ್ರ **ಪ್ರಥಮ್**ನ ಬ್ರಹ್ಮೋಪದೇಶವು ದಿನಾಂಕ 02-05-2014 ರಂದು ಮೂಡಬಿದರೆಯ ಬನ್ನಡ್ಕ ಶ್ರೀ ರಾಘವೇಂದ್ರ ಮಠದಲ್ಲಿ ನೆರವೇರಿತು.

*** ***

### ಚಿ। ಅಮೀಶ್ ರಾವ್

ಶ್ರೀಮತಿ ವೀಣಾ ಮತ್ತು ಶ್ರೀ ಗಣೇಶ್ ರಾವ್ ಇವರ ಪುತ್ರ **ಅಮೀಶ್ ರಾವ್** ಇವರ ಬ್ರಹ್ಮೋಪದೇಶವು ತಾ 05-05-2014 ರಂದು ಬಾರಕೂರಿನ ಮಸ್ಕಿಬೈಲ್ ನಲ್ಲಿರುವ ಸ್ವಗೃಹ "ಶ್ರೀ ಬಟ್ಟೆವಿನಾಯಕ"ದಲ್ಲಿ ನೆರವೇರಿತು.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.17-05-2014) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.19-05-2014 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.17-05-2014 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಚಿ। ಶ್ರೀವತ್ಸ

ಶ್ರೀಮತಿ ಲಕ್ಷ್ಮೀ ಮತ್ತು ಶ್ರೀ ನಾರಾಯಣನ ಪುತ್ರ **ಶ್ರೀವತ್ಸ** ಇವರ ಬ್ರಹ್ಮೋಪದೇಶವು ತಾ 01-05-2014 ರಂದು ಕಾರ್ಕಳದ ತೆಳ್ಳಾರು ರಸ್ತೆಯಲ್ಲಿರುವ ವಿನಾಯಕಬೆಟ್ಟು ಶ್ರೀ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ನೆರವೇರಿತು.

*** ***

### ಚಿ। ಶಾಶ್ವತ್

ಕಾಸರಗೋಡಿನಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಸ್ವಾತಿ ಮತ್ತು ಶ್ರೀಕೇದಾರ್‌ನಾಥ್ ಇವರ ಪುತ್ರ **ಶಾಶ್ವತ್**ನ ಬ್ರಹ್ಮೋಪದೇಶವು ದಿನಾಂಕ 24-04-2014ರಂದು ಕೋಡಿಂಬಾಳದ "ಪಾಜೋವು ಮನೆ"ಯಲ್ಲಿ ನೆರವೇರಿತು.

### ಚಿ। ಆಕಾಶ್

ಉಡುಪಿ ಚಿಟ್ಪಾಡಿ ಶ್ರೀಮತಿ ಹೇಮಲತಾ ಮತ್ತು ಶ್ರೀ ನರಸಿಂಹರಾವ್ (ಕುಮಾರ್) ಇವರ ಪುತ್ರ **ಆಕಾಶ್**ನ ಬ್ರಹ್ಮೋಪದೇಶವು ದಿನಾಂಕ 18-04-2014ರಂದು ಚಿಟ್ಪಾಡಿ ಸ್ವಗೃಹದಲ್ಲಿ ನೆರವೇರಿತು.

*** ***

### ಚಿ। ಅಖಿಲೇಶ್

ಉಡುಪಿ ಚಿಟ್ಪಾಡಿಯ ಶ್ರೀಮತಿ ಗಾಯತ್ರಿ ಮತ್ತು ಸುಬ್ರಹ್ಮಣ್ಯರಾಯರ ಪುತ್ರ **ಅಖಿಲೇಶ್**ನ ಬ್ರಹ್ಮೋಪದೇಶವು ದಿನಾಂಕ 12-05-2014 ರಂದು ಚಿಟ್ಪಾಡಿಯ ಸ್ವಗೃಹದಲ್ಲಿ ನೆರವೇರಿತು.

*** ***

### ಚಿ। ಸಿದಾಂತ್

ಮುಂಬಯಿಯಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಮಾಲವಿಕ ಮತ್ತು ಶ್ರೀ ಸಂದೀಪ್ ಸುರೇಶ್ ಲೋಕೇಶ್ವರ್ ಇವರ ಪುತ್ರ **ಸಿದ್ಧಾಂತ್**ನ ಬ್ರಹ್ಮೋಪದೇಶವು ದಿನಾಂಕ 11-05-2014ರಂದು ಮುಂಬಯಿಯ ಶ್ರೀ ಪೇಜಾವರ ಮಠದಲ್ಲಿ ನೆರವೇರಿತು.

## ಗೃಹ ಪ್ರವೇಶ

ಶ್ರೀಮತಿ ಪ್ರೀತಿ ಎಸ್.ರಾವ್ ಮತ್ತು ಶ್ರೀ ಸಂತೋಷ ಎಂ.ರಾವ್ (ಮಸ್ಕಿಬೈಲು ಬಾಬುರಾಯರ ಪುತ್ರ) ದಂಪತಿಗಳು ಉಡುಪಿ ಚಿಟ್ಪಾಡಿಯ ಪದ್ಮನಾಭ ನಗರದಲ್ಲಿ ನಿರ್ಮಿಸಿದ ನೂತನ ಮನೆ 'ಅಭ್ಯುತ್ಥಾನ'ದ ಪ್ರವೇಶೋತ್ಸವವನ್ನು ದಿನಾಂಕ 24-04-2014ರಂದು ನೆರವೇರಿಸಿದರು.

*** ***

ಶ್ರೀಮತಿ ಪದ್ಮಶ್ರೀ ಮತ್ತು ಶ್ರೀ ಕೆ. ಸತೀಶ ಹೆಬ್ಬಾರ್ ದಂಪತಿಗಳು ಉಡುಪಿ ಸಂತೆಕಟ್ಟೆಯ ಶ್ರೀನಗರದಲ್ಲಿ ನಿರ್ಮಿಸಿದ ನೂತನ ಮನೆ 'ಭ್ರಾಮರ' ಇದರ ಪ್ರವೇಶೋತ್ಸವವನ್ನು ದಿನಾಂಕ 21-04-2014ರಂದು ನೆರವೇರಿಸಿದರು.

*** ***

ಶ್ರೀಮತಿ ಮಮತ ಮತ್ತು ಶ್ರೀ ದಿನೇಶ್ ದಂಪತಿಗಳು ಕರಂಬಳ್ಳಿಯ ಕೃಷ್ಣರಾವ್ ಕಂಪೌಂಡ್‌ನಲ್ಲಿ ನಿರ್ಮಿಸಿದ ನೂತನ ಮನೆ 'ಮಹಾಲಕ್ಷ್ಮೀ'ಯ ಪ್ರವೇಶೋತ್ಸವವನ್ನು ದಿನಾಂಕ 12-05-2014ರಂದು ನೆರವೇರಿಸಿದರು.

*** ***

ಕಾರ್ಕಳ ರಾಘವೇಂದ್ರ ಮಠದ ಸಮೀಪ ಶಬರಿ ಆಶ್ರಮ ರಸ್ತೆಯ ಪಕ್ಕದಲ್ಲಿ ವಾಸ್ತವ್ಯದಲ್ಲಿರುವ ಕೋಲ್ಪೆ ಶ್ರೀ ವಿಠಲರಾವ್ ದಂಪತಿಗಳು ನವೀಕರಿಸಿದ ತಮ್ಮ ಮನೆ "ಆಶ್ರಯ"ದಲ್ಲಿ ಶ್ರೀ ಗಣಹೋಮ, ದುರ್ಗಾಪೂಜೆ, ರುದ್ರಾಭಿಷೇಕ, ಸತ್ಯನಾರಾಯಣ ಪೂಜೆ ಸಹಿತ ಬ್ರಾಹ್ಮಣ ಸುಹಾಸಿನೀ ಆರಾಧನೆಯನ್ನು ದಿನಾಂಕ 13-04-2014ರಂದು ಬಂಧು ಬಾಂಧವರೊಡಗೂಡಿ ನೆರವೇರಿಸಿದರು.

## ವಿಳಾಸ ಬದಲಾವಣೆ

**K. GIRISH KUMAR**
'SINDOORA'
Near Vera Maruthi Temple,
J P H P School, Kote Bagilu (G)
Back Side Road,
KoteBagilu MOODABEDRE - 574227 .

**ರಾಜಶೇಖರ್**
'ಚೈತನ್ಯ ನಿಲಯ',
ಮನೆ ನಂ 10-29, ಸಂಪಿಗೆನಗರ,
ಉದ್ಯಾವರ ಅಂಚೆ
ಉಡುಪಿ ಜಿಲ್ಲೆ-574118

## ಅರವಿಂದರಾವ್‌ರವರಿಗೆ ಗೌರವಾರ್ಪಣೆ

ದಿನಾಂಕ 16-03-2014ರಂದು ಪಡುಬಿದ್ರೆಯ ಸ್ಥಾನಿಕ ಸಭಾದ ಮಾಸಿಕ ಸಭೆಯು ಎಲ್ಲೂರಿನ ವೈ.ವಿ.ಸುಬ್ಬರಾವ್ ಇವರ ನೂತನ ಗೃಹ 'ಶ್ರೀ ಧವಳ'ದಲ್ಲಿ ನಡೆಯಿತು. ಸಭೆಯಲ್ಲಿ ಸಂಘದ ನಿರ್ದೇಶಕರಾದ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಸುದೀರ್ಘ ಸೇವೆಸಲ್ಲಿಸಿ ನಿವೃತ್ತರಾದ ಸಂಘದ ಕೋಶಾಧಿಕಾರಿ ಶ್ರೀ ಅರವಿಂದ ರಾವ್ ಇವರನ್ನು ಗೌರವಿಸಲಾಯಿತು. ಅಲ್ಲದೆ ಮುಂಡ್ಕೂರು ವಿದ್ಯಾವರ್ಧಕ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ವೈ.ಸುದರ್ಶನರಾವ್ ಇದೀಗ ಅದೇ ಕಾಲೇಜಿನ ಪ್ರಾಂಶುಪಾಲರಾಗಿ ಪದೋನ್ನತಿ ಪಡೆದು ಅಧಿಕಾರ ಸ್ವೀಕರಿಸಿದ್ದು, ಅವರನ್ನು ಈ ಸಭೆಯಲ್ಲಿ ಅಭಿನಂದಿಸಲಾಯಿತು.

## ವಿದೇಶ ಪ್ರಯಾಣ

ಮುಂಬೈ ಮುಲುಂಡ್‌ನಲ್ಲಿರುವ ಕಡಂದಲೆ ಶ್ರೀ ಶ್ರೀಪತಿ ರಾವ್ ಅಧಿಕಾರಿ ಹಾಗೂ ಶ್ರೀಮತಿ ಗೀತಾ ಎಸ್ ಅಧಿಕಾರಿ ದಂಪತಿಗಳು ಅಮೇರಿಕಾದಲ್ಲಿರುವ ತಮ್ಮ ಪುತ್ರ ಹಾಗೂ ಪುತ್ರಿಯರೊಂದಿಗೆ ವಾಸ್ತವ್ಯಕ್ಕಾಗಿ ದಿನಾಂಕ 04-06-2014 ರಂದು ಅಮೇರಿಕಾದ ಕ್ಯಾಲಿಫೋರ್ನಿಯಾಕ್ಕೆ ತೆರಳಲಿದ್ದಾರೆ.

★★★ ★★★

ಉಡುಪಿ ಅಂಬಲಪಾಡಿಯ ಶ್ರೀ ನಿತ್ಯಾನಂದ ಶ್ಯಾನುಭಾಗ್ ಹಾಗೂ ಶ್ರೀಮತಿ ಮಹಾಲಕ್ಷ್ಮೀ ಶ್ಯಾನುಭಾಗ್ ದಂಪತಿಗಳು ದಿನಾಂಕ 16-05-2014 ರಂದು ಬೆಂಗಳೂರಿನಿಂದ ಹೊರಟು 2 ವಾರಗಳ ಕಾಲ ಪೂರ್ವ ಹಾಗೂ ಪಶ್ಚಿಮ ಅಮೇರಿಕಾದ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸಕ್ಕಾಗಿ ತೆರಳಲಿದ್ದಾರೆ.

## ಉದ್ಯೋಗ ನಿಮಿತ್ತ ಜರ್ಮನಿಗೆ

ಏರಿಕ್ಕಳದ ಶ್ರೀ ಶಂಕರ ನಾರಾಯಣ ರಾವ್ ಹಾಗೂ ಶ್ರೀಮತಿ ಸುಲೋಚನಾ ದಂಪತಿಗಳ ಪುತ್ರ ಶ್ರೀ ಸೂರಜ್ ರಾವ್ ಬೆಂಗಳೂರಿನ ಟಿ.ಸಿ.ಎಸ್. ಕಂಪನಿಯಲ್ಲಿ ಉದ್ಯೋಗಿಯಾಗಿದ್ದು, ಕಂಪನಿಯ ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ಉದ್ಯೋಗಕ್ಕಾಗಿ ದಿನಾಂಕ 24-04-2014ರಂದು ವಿದೇಶ ಪ್ರಯಾಣಗೈದಿದ್ದಾರೆ.



ಕಾಂತಮಂಗಲದಲ್ಲಿ ದೃಢ ಕಲಶ ಧಾರ್ಮಿಕ ವಿಧಿಗಳು ಶ್ರೀದೇವಳದ ಆಡಳಿತ ವರ್ಗ ಮತ್ತು ಭಕ್ತಬಾಂಧವರ ಉಪಸ್ಥಿತಿಯಲ್ಲಿ ನೆರವೇರಿತು

## ಲೇಖನಗಳಿಗೆ ಆಹ್ವಾನ

**ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ "ಶ್ರೀ ಶಾರದಾ" ಪತ್ರಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ನಮ್ಮ ಸಮಾಜದ ಮನೆಗಳಲ್ಲಿ ನಡೆದ ವಿವಿಧ ಸಮಾರಂಭಗಳ, ಸಂಘ ಸಂಸ್ಥೆಗಳಲ್ಲಿ ನಡೆದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಸಭೆ-ಸಮಾರಂಭಗಳ ವರದಿ, ಛಾಯಾಚಿತ್ರ ಮತ್ತು ಸಾಹಿತ್ಯಿಕ ಲೇಖನಗಳನ್ನು ಹಾಳೆಯ ಒಂದೇ ಮಗ್ಗುಲಲ್ಲಿ ಬರೆದು ಅಥವಾ ಇ-ಮೈಲ್ ಮೂಲಕ ಕಳುಹಿಸಿಕೊಡಬಹುದು.**

**ಕಳುಹಿಸಬೇಕಾದ ವಿಳಾಸ :**
**ಸಂಪಾದಕರು,**
**"ಶ್ರೀ ಶಾರದಾ" ಪತ್ರಿಕೆ,**
**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-೫೭೬೧೦೨**
**ಇ-ಮೈಲ್ ವಿಳಾಸ : krishnakumar.rao123@email.com**

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



**ಡಾ। ವೈ. ಸುದರ್ಶನ ರಾವ್**

**ಪ್ರಶ್ನೆ: ನಮ್ಮ ಆಹಾರವು ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ?**

**ಉತ್ತರ :** ಪ್ರತಿಯೊಂದು ಜೀವಿಗೂ ಆಹಾರದ ಅವಶ್ಯಕತೆ ಇರುವುದು ಪ್ರಕೃತಿ ನಿಯಮ. ಆಹಾರ ಸೇವಿಸುತ್ತದೆನ್ನುವುದು ಈ ಭೂಮಂಡಲದಲ್ಲಿರುವ ವಸ್ತುವೊಂದನ್ನು ಜೀವಿ ಎಂದು ಗುರುತಿಸಲು ಬೇಕಾದ ಅಂಶವೂ ಹೌದು. ಜೀವವೊಂದು ಈ ಪ್ರಪಂಚದಲ್ಲಿ ಅಂಕುರವಾದ ಗಳಿಗೆಯಿಂದ ಅದಕ್ಕೆ ಆಹಾರದ ಅಗತ್ಯ ಬೀಳುತ್ತದೆ. ದೇಹದ ಬೆಳವಣಿಗೆಗೆ, ದಿನನಿತ್ಯದ ಕೆಲಸ ಮಾಡಲು ಬೇಕಾದ ಶಕ್ತಿಗೆ ಹಾಗೂ ಸವೆದು ಹೋದ ಅಂಗಾಂಶಗಳನ್ನು ತುಂಬಿಸಿಕೊಳ್ಳಲಿಕ್ಕೆ ಹೀಗೆ ಮೂರು ಕಾರಣಗಳಿಗಾಗಿ ಜೀವಿಗೆ ಆಹಾರದ ಅವಶ್ಯಕತೆ ಇದೆ.

ದೇಹದ ಅಂಗಾಂಶಗಳು ಬೆಳೆಯಲು ಬೇಕಾಗುವ ಪ್ರೋಟೀನುಗಳು, ದಿನನಿತ್ಯದ ಕೆಲಸಕ್ಕೆ ಬೇಕಾಗುವ ಶಕ್ತಿಗಾಗಿ ಶರ್ಕರ ಪಿಷ್ಟಗಳು, ಶಕ್ತಿಯನ್ನು ನಾಳೆಗಾಗಿ ತೆಗೆದಿಡಲು ಕೊಬ್ಬು , ದೇಹದಲ್ಲಿ ನಡೆಯುವ ಅನೇಕ ರಾಸಾಯನಿಕ ಕ್ರಿಯೆಗಳಿಗಾಗಿ ವಿಟಮಿನ್‌ಗಳು ಹಾಗೂ ಕೆಲವು ವಸ್ತುಗಳ ತಯಾರಿಕೆಗಾಗಿ ಲವಣಗಳು, ಹೀಗೆ ಇವಿಷ್ಟು ಆಹಾರವೆಂದು ಜೀವಿಗಳು ಸೇವಿಸುವ ವಸ್ತುವಿನಲ್ಲಿ ಮೂಲತಃ ದೇಹಕ್ಕೆ ಬೇಕಾಗುವ ಅಂಶಗಳು.

ನಮಗೆ ಬೇಕಾದ, ಮೇಲೆ ಹೇಳಿದ ಅಂಶಗಳನ್ನು ಒಳಗೊಂಡಿರುವ ಆಹಾರ ಇನ್ನೊಂದು ಜೀವಿಯ ರೂಪದಲ್ಲಿರುವುದೊಂದು ದೊಡ್ಡ ವಿಚಿತ್ರ. ಒಂದು ಜೀವಿ ಇನ್ನೊಂದು ಜೀವಿ/ದೇಹವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಿಂದು ಬೆಳೆಯುತ್ತದೆ. ಹಾಗೆಯೇ ಈ ಭೂಮಂಡಲದಲ್ಲಿರುವ ಪ್ರತಿಯೊಂದು ವಸ್ತುವೂ ಯಾವುದಾದರೊಂದು ಜೀವಿಗೆ ಆಹಾರವಾಗಿದೆ.

ನಾವು ಮನುಷ್ಯರು ಈ ಆಹಾರವನ್ನು ಬಾಯಿಯ ಮೂಲಕ ಸೇವಿಸುತ್ತೇವೆ. ನಮ್ಮ ಜೀರ್ಣಾಂಗವ್ಯೂಹವು ಬಾಯಿಯ ಮೂಲಕ ಒಳಬಂದ ಆಹಾರವನ್ನು ವಿಭಜಿಸಿ ಅದರಲ್ಲಿ ನಮ್ಮ ದೇಹಕ್ಕೆ ಬೇಕಾದ ಮೂಲವಸ್ತುಗಳನ್ನು ಪ್ರತ್ಯೇಕಿಸಿ ದೇಹಕ್ಕೆ ಒದಗಿಸಿ ಬೇಡವಾದ ತ್ಯಾಜ್ಯವನ್ನು ಮಲದ ರೂಪದಲ್ಲಿ ಹೊರಹಾಕುತ್ತದೆ.

ನಾವು ಸೇವಿಸುವ ಆಹಾರವು ಮುಖ್ಯವಾಗಿ ಸಸ್ಯಾಹಾರ (ಸಸ್ಯ ದೇಹದ ಯಾವುದೇ ಭಾಗ ), ಮಾಂಸಾಹಾರ (ಪ್ರಾಣಿಯ ದೇಹದ ಭಾಗ), ಹಾಗೂ ಪ್ರಾಣಿಜನ್ಯ ವಸ್ತುವಾದ ಹಾಲು ಎಂದು ಮೂರು ರೂಪದಲ್ಲಿದೆ. ಏಕದಳ ಹಾಗೂ ದ್ವಿದಳ ಧಾನ್ಯಗಳು, ಬೇಳೆ ಕಾಳುಗಳು, ಬೀಜಗಳು, ಸೊಪ್ಪು ತರಕಾರಿ ಹಾಗೂ ಹಣ್ಣುಗಳು, ಗಡ್ಡೆಗೆಣಸುಗಳು, ಎಣ್ಣೆ ಬೆಣ್ಣೆ ಹಾಗೂ ತುಪ್ಪ, ಸಕ್ಕರೆ ಮತ್ತು ಬೆಲ್ಲ, ಮಸಾಲೆ ಪದಾರ್ಥಗಳು, ಮಾಂಸ, ಮೀನು ಮೊಟ್ಟೆ ಹಾಗೂ ಹಾಲು, ಕಾಫೀ, ಚಹಾ, ಚಾಕೋಲೇಟ್, ತಂಪು ಪಾನೀಯ ಹಾಗೂ ಮದ್ಯ ಇವೆಲ್ಲವನ್ನು ನಮ್ಮ ಆಹಾರದ ಪಟ್ಟಿಯಲ್ಲಿ ಸೇರಿಸಬಹುದು.

ನಮ್ಮ ಆಹಾರ ಹೇಗಿರಬೇಕು? ಅದರಲ್ಲಿ ಅಂಗಾಂಗಗಳ ಬೆಳವಣಿಗೆಗೆ ಸಾಕಷ್ಟು ಪ್ರೋಟೀನ್ ಅಂದಾಜು ದಿನಕ್ಕೆ ಒಂದು ಗ್ರಾಂ/ಕೆ.ಜಿ ದೇಹದ ತೂಕದಂತೆ ಅರವತ್ತರಿಂದ ಎಪ್ಪತ್ತು ಗ್ರಾಂ), ಚಟುವಟಿಕೆಗೆ ಬೇಕಾದಷ್ಟು ಶಕ್ತಿ ಒದಗಿಸುವ ಶರ್ಕರಪಿಷ್ಟ ಹಾಗೂ ಕೊಬ್ಬು ಇರಬೇಕು (ಅಂದಾಜು ದಿನಕ್ಕೆ 400ಗ್ರಾಂ ಶರ್ಕರ ಪಿಷ್ಟ ಹಾಗೂ 160 ಗ್ರಾಂ ಕೊಬ್ಬು ) ಹಾಗೆಯೇ ಎಲುಬಿನ ಬೆಳವಣಿಗೆಗೆ ಕ್ಯಾಲ್ಸಿಯಂ, ಮೆಗ್ನೇಸಿಯಮ್, ಪಾಸ್ಪರಸ್. ರಕ್ತಕ್ಕಾಗಿ ಕಬ್ಬಿಣ, ತಾಮ್ರ, ಜಿಂಕ್ ಹಾಗೆಯೇ ಸೋಡಿಯಂ, ಪೊಟ್ಯಾಸಿಯಂ, ಕ್ಲೋರಿನ್, ಫ್ಲೋರಿನ್, ಐಯೋಡಿನ್ ಇತ್ಯಾದಿ ಲವಣಗಳು, ರಾಸಾಯನಿಕಗಳು ಇರಬೇಕು. ಹೀಗೆ ಸುಮಾರು ದಿನಕ್ಕೆ ಒಂದು ಕೆ.ಜಿ.ಯಷ್ಟು ನಾವು ಸೇವಿಸುವ ಆಹಾರದಲ್ಲಿ ನಮಗೆ ನಿಜವಾಗಿ ಬೇಕಾದ ಅಂಶಗಳ ತೂಕ ಸುಮಾರು ಐನೂರು ಗ್ರಾಂ ಇದ್ದರೆ, ಅದರಲ್ಲಿ ಉಳಿದ ಜೀರ್ಣವಾಗದೇ ಇರುವುದು (ನಾರು) ತ್ಯಾಜ್ಯವಾಗಿ ಮಲರೂಪದಲ್ಲಿ ವಿಸರ್ಜಿಸುವಂತಾದ್ದಾದರೂ ಅದೂ ಆಹಾರದಲ್ಲಿ ಸಾಕಷ್ಟು ಪ್ರಮಾಣದಲ್ಲಿರುವುದೂ ದೇಹದ ಆರೋಗ್ಯಕ್ಕೆ ಅಗತ್ಯ.

ಇನ್ನುವ ಆಹಾರ ಶುಚಿಯಾಗಿರಬೇಕು. ಯಾವುದೇ ಕ್ರಿಮಿ, ಜಂತು, ಮೀಣಜೀವಿಗಳಿಂದ ಮುಕ್ತವಾಗಿರಬೇಕು. ವಿಷಕಾರೀ ರಾಸಾಯನಿಕಗಳಿರಬಾರದು. ದೇಹಕ್ಕೆ ಬೇಕಾದ ಪೌಷ್ಟಿಕಾಂಶ ಹಾಗೂ ನಾರು ಸಮಪ್ರಮಾಣದಲ್ಲಿ ಮಿಳಿತವಾಗಿರಬೇಕು, ದೈಹಿಕ ಪರಿಸ್ಥಿತಿಗೆ (ಪ್ರಾಯ ತೂಕ ಹಾಗೂ ಇರುವ ಖಾಯಿಲೆಗಳಿಗೆ) ಪೂರಕವಾಗಿರಬೇಕು. ತಿನ್ನಲು ಸ್ವಾದಿಷ್ಟವಾಗಿರಬೇಕು ಹಾಗೂ ಸ್ವಚ್ಛ ಹಾಗೂ ಆಹ್ಲಾದಕರ ವಾತಾವರಣದಲ್ಲಿ ಸೇವಿಸಲು ಲಭ್ಯವಿರಬೇಕು. ಇದು ಆದರ್ಶ ಆಹಾರದ ಲಕ್ಷಣಗಳು.

ನಮ್ಮ ಆಹಾರದ ಬಗೆಗಿನ ಸಣ್ಣ ವಿಶ್ಲೇಷಣೆಯ ನಂತರ ನಮ್ಮ ಆಹಾರದಿಂದ ನಮ್ಮ ಆರೋಗ್ಯಕ್ಕೆ ಯಾವ ರೀತಿಯ ಪರಿಣಾಮವಾಗಬಹುದೆಂದು ಪರಿಶೀಲಿಸೋಣ. ಒಂದನೆಯದಾಗಿ ನಮ್ಮ ಆಹಾರದಲ್ಲಿ ನಮಗೆ ಬೇಕಾದ ಪೌಷ್ಟಿಕ ಅಂಶಗಳು ಇರಬೇಕಾದ ಪ್ರಮಾಣದಲ್ಲಿ ಇರದಿರುವುದರಿಂದ ಅಥವಾ ಹೆಚ್ಚಿಗೆ ಇರುವುದರಿಂದ ಆರೋಗ್ಯಕ್ಕೆ ಹಾನಿಯಾಗಬಹುದು. ಎರಡನೆಯದಾಗಿ ನಾವು ಮೀಣಜೀವಿಗಳು, ಜಂತುಗಳು, ರಾಸಾಯನಿಕಗಳು, ವಿಷವಸ್ತುಗಳಿಂದ ಕಲುಷಿತವಾದ ಆಹಾರವನ್ನು ಸೇವಿಸಿ ನಮ್ಮ ಆರೋಗ್ಯಕ್ಕೆ ಹಾನಿ ಮಾಡಿಕೊಳ್ಳಬಹುದು. ಸೇವಿಸಿದ ಆಹಾರದಲ್ಲಿ ತ್ಯಾಜ್ಯವಾಗಿ ಹೋಗುವ ವಸ್ತುಗಳೂ ಸೇರಿಸಿ ಇರಬೇಕಾದ ಎಲ್ಲಾ ಅಂಶಗಳ ಆಳತೆ ಪ್ರಮಾಣದಲ್ಲಿ ತಾಳಮೇಳವಿಲ್ಲದೆ ಆರೋಗ್ಯಕ್ಕೆ ಹಾನಿಯಾಗುವುದು ಮೂರನೆಯದು. ಹೀಗೆ ಆಹಾರದಿಂದಾಗಿ ನಮಗೆ ಬರುವ ಕಾಯಿಲೆಗಳನ್ನು ನಮ್ಮ ಆಹಾರದ ಪೌಷ್ಟಿಕತೆಯ ಗುಣಮಟ್ಟದಿಂದ ಬರುವ ಖಾಯಿಲೆಗಳು, ಆಹಾರದಲ್ಲಿ ಮೀಣಜೀವಿಗಳು ಹಾಗೂ ಜಂತುಗಳಿಂದ ಕಲುಷಿತವಾದ ಆಹಾರ ಸೇವನೆಯಿಂದ ಬರುವ ಖಾಯಿಲೆಗಳು, ರಾಸಾಯನಿಕ ಹಾಗೂ ವಿಷವಸ್ತುಗಳಿಂದ ಕಲುಷಿತವಾದ ಆಹಾರ ಸೇವನೆಯಿಂದ ಬರುವ ಖಾಯಿಲೆಗಳು ಎಂದು ವರ್ಗೀಕರಿಸಬಹುದು

(ಮುಂದುವರಿಯುವುದು)

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.**
**ಸಂಚಾರಿ ದೂರವಾಣಿ ನಂ. : 9845136322**

# ಶುಭಾಶಯಗಳು



## ಶ್ರೀ ಯು. ಪ್ರಫುಲ್ಲಚಂದ್ರರಾವ್ ಮತ್ತು ಶ್ರೀಮತಿ ಪೂರ್ಣಿಮಾ ರಾವ್

ತಮ್ಮ ತಂದೆಯವರಾದ ದಿ| ಉದ್ಯಾವರ ಅನಂತಕೃಷ್ಣರಾಯರ ಆದರ್ಶತೆಗಳನ್ನು ಮೈಗೂಡಿಸಿಕೊಂಡು, ಸಮಾಜಮುಖಿಯಾಗಿ,
ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದಲ್ಲಿ ವಿವಿಧ ಪದಾಧಿಕಾರಗಳನ್ನು ನಿರ್ವಹಿಸಿ, ಸಂಘದ ಬೆಳವಣಿಗೆಯಲ್ಲಿ ಪ್ರಮುಖರಾಗಿ,
ಉಡುಪಿಯ ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಪ್ರವರ್ತಕರಾಗಿ-ನಿರ್ದೇಶಕರಾಗಿ ಸಂಸ್ಥೆಯ ಪ್ರಗತಿಗೂ ಕಾರಣರಾಗಿ,
ಇದೀಗ ವೈವಾಹಿಕ ಬೆಳ್ಳಿ ಹಬ್ಬದ ಸಂಭ್ರಮದಲ್ಲಿರುವ ನಮ್ಮ ಸಂಘದ ಅಧ್ಯಕ್ಷರಾದ
**ಶ್ರೀ ಯು. ಪ್ರಫುಲ್ಲಚಂದ್ರರಾವ್ ಮತ್ತು ಶ್ರೀಮತಿ ಪೂರ್ಣಿಮಾ ದಂಪತಿಗಳಿಗೆ ಶುಭ ಹಾರೈಸುತ್ತಾ,**
ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಶ್ರೇಯಸ್ಸು ತಮ್ಮದಾಗಲಿ,
ಆ ಮೂಲಕ ಸಮಾಜಕ್ಕೆ ತಮ್ಮ ಸೇವೆ ನಿರಂತರವಾಗಲಿ ಎಂದು ಶ್ರೀಶಾರದಾ ಮಾತೆಯಲ್ಲಿ ಪ್ರಾರ್ಥನೆ.

– ಶ್ರೀ ಶಾರದಾ ಬಳಗ
ಶ್ರೀ ಶಾರದಾಮಂಟಪ, ಕುಂಜಿಬೆಟ್ಟು, ಉಡುಪಿ.

## ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು
ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

| | |
|---|---|
| #1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010 | ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |

**ಮೊಬೈಲ್– 9886629697, 9986119865**

## ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್ Cell : 9845644556, 9483913344

## ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161, 97417 85551

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

## Harikrishna Digitals

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102




## RAJESH POWER PRESS

**PRINTERS & PUBLISHERS**

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org